
# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಸಂಪುಟ : 37 ಸಂಚಿಕೆ : 3 ಮನ್ಮಥ–ಸಿಂಹ ಕಲಿಯುಗಾಬ್ದ 5117 15–9–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


## 1965ರ ಭಾರತ–ಪಾಕ್ ಯುದ್ಧಕ್ಕೆ 50 ವರ್ಷಗಳು

# ಮರೆಯಲಾಗದ ಮಹಾಕದನ

ದೇಶದ ಏಕತೆ ಮತ್ತು ಸಮಗ್ರತೆಯನ್ನು ಗಟ್ಟಿಯಾಗಿರಿಸುವಲ್ಲಿ ಭೌಗೋಳಿಕ ಗಡಿಗಳು ಸುರಕ್ಷಿತವಾಗಿರುವುದರ ಜೊತೆಗೆ ಜನಮಾನಸದಲ್ಲಿ ರಾಷ್ಟ್ರದ ಆತ್ಮಗೌರವವನ್ನು ಎತ್ತಿಹಿಡಿಯಬೇಕೆಂಬ ಪ್ರಜ್ಞೆ ಜಾಗೃತವಾಗಿರುವುದೂ ಅತ್ಯಗತ್ಯವಾಗಿದೆ. ಶೌರ್ಯ ಮತ್ತು ವಿಜಯಗಳ ಗಾಥೆಗಳು ರಾಷ್ಟ್ರಾಭಿಮಾನದ ಭಾವನೆಯನ್ನು ಹೆಚ್ಚಿಸುತ್ತವೆ. ಭಾರತ ವಿರೋಧಿ ಶಕ್ತಿಗಳು ನಮ್ಮ ಸಾಧನೆಗಳನ್ನು ತಗ್ಗಿಸಿ ದೇಶದ ಆತ್ಮಸ್ಥೈರ್ಯವನ್ನು ಕುಗ್ಗಿಸಲು ಸದಾ ಪ್ರಯತ್ನ ನಡೆಸುವುದು ಹೊಸದೇನಲ್ಲ. ಇಂದಿಗೆ ಐವತ್ತು ವರ್ಷಗಳ ಹಿಂದೆ 1965ರಲ್ಲಿ ಅತಿಕ್ರಮಣದ ಸಾಹಸಕ್ಕೆ ಮುಂದಾದ ಪಾಕಿಸ್ತಾನ ಸೈನ್ಯವನ್ನು ಹಿಮ್ಮೆಟ್ಟಿಸಿ ತಕ್ಕ ಪಾಠ ಕಲಿಸಿದ ನಮ್ಮ ವೀರಯೋಧರ ಸಾಧನೆಯನ್ನು, ಇದೊಂದು ಅನಿರ್ಣಾಯಕವಾದ ಸಂಘರ್ಷ ಎಂದು ಬಿಂಬಿಸಿ ಜನರ ನೆನಪಿನಿಂದ ಮರೆಯಾಗುವಂತೆ ಮಾಡಿದ್ದು ಅಪಚಾರವೇ ಸರಿ. ಈ ಹಿನ್ನೆಲೆಯಲ್ಲಿ 1965ರ ಆಗಸ್ಟ್ 5 ರಿಂದ ಸೆಪ್ಟೆಂಬರ್ 22ರವರೆಗೆ ನಡೆದ ಪಾಕಿಸ್ತಾನ ಯುದ್ಧದ 50ನೇ ವರ್ಷಾಚರಣೆಯನ್ನು ನಡೆಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದು ದೇಶದ ರಕ್ಷಣೆಯಲ್ಲಿ ಪ್ರಾಣತೆತ್ತ ಸಹಸ್ರಾರು ಸೈನಿಕರಿಗೆ ಸಲ್ಲಿಸುವ ಸೂಕ್ತ ಗೌರವವಾಗಿದೆ.



## ನಡೆದದ್ದಿಷ್ಟು...

ಎರಡನೇ ವಿಶ್ವಯುದ್ಧದ ನಂತರ ನಡೆದ ಅತ್ಯಂತ ಉಗ್ರವಾದ ಸಮರವೆಂದೇ ಬಣ್ಣಿಸಲಾಗುವ 1965 ಭಾರತ–ಪಾಕಿಸ್ತಾನ ಕದನ ಕಛ್‌ದಿಂದ ಕಾಶ್ಮೀರದವರೆಗಿನ ಭಾರತದ ಪಶ್ಚಿಮದಗಡಿಯುದ್ದಕ್ಕೂ ನಡೆಯಿತು. 1962ರ ಚೀನಾ ಯುದ್ಧದ ಸೋಲಿನಿಂದ ಭಾರತದ ಸೈನಿಕಶಕ್ತಿ ಮತ್ತು ಆರ್ಥಿಕ ಶಕ್ತಿ ದುರ್ಬಲವಾಗಿದೆ, ಇದರ ಲಾಭ ಪಡೆದು ಕಾಶ್ಮೀರವನ್ನು ಕಬಳಿಸಬೇಕೆಂಬ ಪಾಕಿಸ್ತಾನದ ಹುನ್ನಾರವೇ ಈ ಯುದ್ಧಕ್ಕೆ ಮೂಲಕಾರಣ. ಪಾಕಿಸ್ತಾನಿ ಮಿಲಿಟರಿ ಗುಪ್ತಚರ ಇಲಾಖೆ ಮತ್ತು ವಿದೇಶಾಂಗ ಮಂತ್ರಿ ಝುಲ್ಫಿಕರ್ ಅಲಿ ಭುಟ್ಟೋ ನೇತೃತ್ವದ ಸಚಿವಾಲಯ ಈ ವಿಷಯಗಳನ್ನು ಮುಂದಿಟ್ಟುಕೊಂಡು, ಕಾಶ್ಮೀರದಲ್ಲಿ ಪ್ರಬಲವಾದ ಭಾರತ ವಿರೋಧಿ ಅಲೆ ಇದೆ; ಅಲ್ಲಿನ ಜನರು ಪಾಕಿಸ್ತಾನದೊಂದಿಗೆ ಸೇರಲು ಉತ್ಸುಕರಾಗಿದ್ದಾರೆ ಎಂಬ ವಾದವನ್ನು ಮಂಡಿಸಿ, ಕಾಶ್ಮೀರವನ್ನು ಆಕ್ರಮಿಸಲು ಇದು ಸುಸಂದರ್ಭ ಎಂದು ಅಂದಿನ ರಾಷ್ಟ್ರಪತಿ ಅಯೂಬ್ ಖಾನ್‌ನನ್ನು ಒಪ್ಪಿಸುವಲ್ಲಿ ಯಶಸ್ವಿಯಾದರು.

1965ರ ಜನವರಿಯಲ್ಲಿ 'ಆಪರೇಶನ್ ಡೆಸರ್ಟ ಹ್ಯಾಕ್' ಎಂಬ ಹೆಸರಿನಲ್ಲಿ ಪಾಕಿಸ್ತಾನ ಸೈನ್ಯ ಗುಜರಾತ್‌ನ ಕಛ್ ಪ್ರದೇಶಕ್ಕೆ ನುಸುಳುವ ಮೂಲಕ ಅತಿಕ್ರಮಣವನ್ನು ಪ್ರಾರಂಭಿಸಿತು. ಭಾರತೀಯ ಸೈನ್ಯದ ಗಮನವನ್ನು ಕಛ್‌ನತ್ತ ಸೆಳೆದು ಕಾಶ್ಮೀರದ ಕಡೆ ಒಳನುಸುಳುವುದು ಪಾಕಿಸ್ತಾನದ ಮೂಲ ಉದ್ದೇಶವಾಗಿತ್ತು. ಆರಂಭಿಕ ಗುಂಡಿನ ದಾಳಿಯ ನಂತರ ಪಾಕಿಸ್ತಾನ ಸೈನ್ಯ ಭಾರತದ ಕೆಲವು ಚೆಕ್‌ಪೋಸ್ಟಗಳನ್ನು ಆಕ್ರಮಿಸಿಕೊಂಡು, ಮಾತುಕತೆಗೆ ಆಹ್ವಾನ ನೀಡಿತು. ಪಾಕಿಸ್ತಾನ ಆಕ್ರಮಿಸಿದ ಪ್ರದೇಶವನ್ನು ತೆರವುಗೊಳಿಸದ ಹೊರತು ಯಾವುದೇ ಮಾತುಕತೆಗೆ ತಾನು ಸಿದ್ಧವಿಲ್ಲವೆಂದು ಭಾರತ ಹೇಳಿದರೂ ಬ್ರಿಟನ್ನಿನ ಒತ್ತಡಕ್ಕೆ ಮಣಿದು ಕದನವಿರಾಮಕ್ಕೆ ಒಪ್ಪಿತು. ಜೂನ್ 30ರ ಕದನವಿರಾಮ ಒಪ್ಪಂದದಂತೆ ಪಾಕಿಸ್ತಾನ ಅತಿಕ್ರಮಣ ಮಾಡಿದ ಪ್ರದೇಶದಿಂದ ಹಿಂತೆಗೆಯಲೇನೋ ಒಪ್ಪಿತು; ಆದರೆ ಭಾರತ ಸರ್ಕಾರ ಮತ್ತು ಸೈನ್ಯ ಯುದ್ಧಕ್ಕೆ ಸಿದ್ಧವಿಲ್ಲ ಎಂದು ಭಾವಿಸಿ ಎದೆಯುಬ್ಬಿಸಿಕೊಂಡಿತು. "ಮುಂದಿನ ಬಾರಿ ಪಾಕಿಸ್ತಾನ ಯುದ್ಧ ಬಯಸಿದರೆ ಭಾರತ ತನ್ನ ಆಯ್ಕೆಯ ಸಮಯದಲ್ಲಿ ತಾನು ಆರಿಸಿದ ಪ್ರದೇಶದ ಮೇಲೆ ದಾಳಿ ಮಾಡುತ್ತದೆ" ಎಂದ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಮಾತನ್ನು ಪಾಕಿಸ್ತಾನ ಲಘುವಾಗಿ ಪರಿಗಣಿಸಿತು.

ಈ ನಡುವೆ ಕಾಶ್ಮೀರದ ನಿಯಂತ್ರಣ ರೇಖೆಯುದ್ದಕ್ಕೂ ಗುಂಡಿನ ದಾಳಿಗಳು, ಒಳನುಸುಳುವುದು ಮುಂತಾದ ಪ್ರಚೋದನಕಾರಿ ಚಟುವಟಿಕೆಗಳು ಹೆಚ್ಚಾಗಿದ್ದಲ್ಲದೇ, ಆಗಸ್ಟ್ ತಿಂಗಳಿನಲ್ಲಿ ಪಾಕಿಸ್ತಾನದಿಂದ ಸುಮಾರು 30,000ಕ್ಕೂ ಹೆಚ್ಚು ನುಸುಳುಕೋರರು, ಅವರಲ್ಲಿ ಬಹುತೇಕ ಪಾಕಿಸ್ತಾನಿ ಸೈನಿಕರು, ನಿಯಂತ್ರಣ ರೇಖೆಯನ್ನು ದಾಟಿ ಒಳನುಸುಳಿದರು. ದೊಡ್ಡ ಪ್ರಮಾಣದಲ್ಲಿ ಗಲಭೆಯೆಬ್ಬಿಸಿ ಸ್ಥಳೀಯ ಜನರ ಅನುಕಂಪ ಗಳಿಸುವುದು ಇವರ ಉದ್ದೇಶವಾಗಿತ್ತು. 'ಆಪರೇಶನ್ ಜಿಬ್ರಾಲ್ಟರ್' ಹೆಸರಿನ ಈ ಅತಿಕ್ರಮಣದ ಮಾಹಿತಿ ದುರದೃಷ್ಟವಶಾತ್ ಒಂದು ವಾರ ತಡವಾಗಿ ಭಾರತೀಯ ಸೇನೆಗೆ ದೊರಕಿತು. ಆಗಸ್ಟ್ 8ರಂದು ಪೀರ್ ದಸ್ತಗೀರ್ ಸಾಹಿಬ್ ಉತ್ಸವ ಹಾಗೂ ಮರುದಿನ ಶೇಖ್ ಅಬ್ದುಲ್ಲಾರ ಬಂಧನದ ವಿರುದ್ಧದ ಪ್ರತಿಭಟನೆಯ ಸಂದರ್ಭದಲ್ಲಿ ತಮ್ಮ ಕಾರ್ಯವನ್ನು ಸಾಧಿಸುವ ಪಾಕಿಸ್ತಾನದ ಯೋಜನೆಗೆ ಭಾರತೀಯ ಸೈನ್ಯದ ಜಾಗರೂಕತೆಯಿಂದ ಹಿನ್ನಡೆಯಾಯಿತು. ಅನೇಕ ಒಳನುಸುಳುಕೋರರು ಬಂಧಿಸಲ್ಪಟ್ಟರು. ರಾಜ್ಯಾದ್ಯಂತ ಸುರಕ್ಷತೆಯನ್ನು ಬಿಗಿಗೊಳಿಸಲಾಯಿತು. ಒಳನುಸುಳುಕೋರರ ವಿರುದ್ಧ ಕಾರ್ಯಾಚರಣೆ ನಡೆಸಲಾಯಿತು. ಸ್ಥಳೀಯರ ಸಹಾಯ ಸಿಗದೆ ಅನೇಕರು ಬಂಧನಕ್ಕೊಳಗಾದರು, ಅನೇಕರು ಶರಣಾದರು, ಕೆಲವರು ಗಡಿದಾಟಿ ಪರಾರಿಯಾದರು.

ಆಗಸ್ಟ್ 28ರಂದು ನಿಯಂತ್ರಣ ರೇಖೆಯನ್ನು ದಾಟಿದ ಭಾರತೀಯ ಸೇನೆ ಪಾಕ್ ಆಕ್ರಮಿತ ಕಾಶ್ಮೀರದ ಹಾಜಿ ಪೀರ್ ಕಣಿವೆ ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಇದೊಂದು ಬಹುಮುಖ್ಯ ವಿಜಯ. ಏಕೆಂದರೆ ಹಾಜಿ ಪೀರ್ ಮೇಲಿನ ನಿಯಂತ್ರಣವೆಂದರೆ ಪಾಕ್ ಆಕ್ರಮಿತ ಕಾಶ್ಮೀರದ ರಾಜಧಾನಿ ಮುಜಾಫರಾಬಾದ್‌ನ್ನು ವಶಕ್ಕೆ ತೆಗೆದುಕೊಂಡಂತೆ.

ಈ ನಡುವೆ ಪಾಕಿಸ್ತಾನವು ಛಂಬ್ ಮತ್ತು ಆಖ್‌ನೂರ್ ಪ್ರದೇಶಗಳಲ್ಲಿ ಆಪರೇಶನ್ ಗ್ರ್ಯಾಂಡ್ ಸ್ಲಾಮ್ ಹೆಸರಿನಲ್ಲಿ ತೀವ್ರ ದಾಳಿ ಆರಂಭಿಸಿತು. ಪರಿಸ್ಥಿತಿಯ ತೀವ್ರತೆಯನ್ನು ಮನಗಂಡ ಪ್ರಧಾನಿ ಶಾಸ್ತ್ರಿ ಎರಡು ಪ್ರಮುಖ ಐತಿಹಾಸಿಕ ನಿರ್ಧಾರಗಳನ್ನು ಕೈಗೊಂಡರು. ಒಂದು ವಾಯುಸೇನೆಯನ್ನು ಯುದ್ಧದಲ್ಲಿ ತೊಡಗಿಸುವುದು. ಭಾರತೀಯ ವಾಯುಸೇನೆಯ 45ನೇ ತುಕಡಿಯನ್ನು ನಿಯೋಜಿಸಿ ಪಾಕಿಸ್ತಾನ ಸೇನೆಯ ಮೇಲೆ ನೇರ ಸಮರ ಸಾರಲಾಯಿತು. ಇನ್ನೊಂದು ಭಾರತೀಯ ಭೂಸೇನೆಗೆ ಪಾಕಿಸ್ತಾನದ ಮೇಲೆ ಯುದ್ಧ ಸಾರಲು ಆದೇಶಿಸಲಾಯಿತು. ಮೊದಲನೇ ಬಾರಿಗೆ ಭಾರತೀಯ ಸೇನೆಯು ಅಂತಾರಾಷ್ಟ್ರೀಯ ಗಡಿಯನ್ನು ದಾಟಿ ಲಾಹೋರ್ ಮತ್ತು ಸಿಯಾಲ್ಕೋಟ್‌ಗಳತ್ತ ನುಗ್ಗಿತು. ಭಾರತೀಯ ವಾಯುಸೇನೆಯ ದಾಳಿಗೆ ಅಮೆರಿಕದಿಂದ ಆಮದಾದ ಪಾಕ್ ಶಸ್ತ್ರಾಸ್ತ್ರಗಳು ನಾಶವಾಗಿ, ಯುದ್ಧವಿಮಾನಗಳು ನೆರವಿಗೆ ಬಾರದೇ, ಅನೇಕ ಯುದ್ಧಟ್ಯಾಂಕರ್‌ಗಳು ಭಾರತದ ವಶವಾದವು. ಪಾಕಿಸ್ತಾನದ ಹೃದಯದಂತಿರುವ ಲಾಹೋರ್ ನಗರವೂ ಭಾರತೀಯ ಸೈನ್ಯದ ದಾಳಿಗೆ ತುತ್ತಾದಾಗ ಗಾಬರಿಗೊಂಡ ಪಾಕಿಸ್ತಾನ ನಡುಗಿ ಮಂಡಿಯೂರಲೇ ಬೇಕಾಯಿತು.

### ಅತಿಕ್ರಮಣಕ್ಕೆ ಮುನ್ನ ಪಾಕಿಸ್ತಾನದ ಸಿದ್ಧತೆ

- ಅಮೆರಿಕದೊಂದಿಗೆ ರಕ್ಷಣಾ ಒಪ್ಪಂದಕ್ಕೆ ಸಹಿಹಾಕಿ ಅಮೆರಿಕದ ನೆರವಿನಿಂದ ಸೈನ್ಯ ಶಕ್ತಿಯನ್ನು ವೃದ್ಧಿಸಿಕೊಂಡಿತು.
- 1954 ರಿಂದ 1965ರ ವರೆಗೆ ಅಮೆರಿಕದಿಂದ ಪ್ಯಾಟನ್ ಟ್ಯಾಂಕ್‌ಗಳು, ಯುದ್ಧ ವಿಮಾನಗಳು, ಜೆಟ್‌ಗಳು, ಮೆಶಿನ್ ಗನ್, ಆಧುನಿಕ ರೈಫಲ್‌ಗಳು ಮುಂತಾದವನ್ನು ದೊಡ್ಡ ಪ್ರಮಾಣದಲ್ಲಿ ಪಡೆದು ತನ್ನ ಯುದ್ಧ ಸಾಮಗ್ರಿಗಳನ್ನು ಸಂಪೂರ್ಣ ಆಧುನೀಕರಣಗೊಳಿಸಿಕೊಂಡಿತು.
- ಪಾಕಿಸ್ತಾನದ ಸೈನ್ಯಾಧಿಕಾರಿಗಳು ಅಮೆರಿಕ ಮತ್ತು ಬ್ರಿಟನ್‌ಗಳಿಂದ ತರಬೇತಿ ಪಡೆದು ಜಂಟಿ ಮಿಲಿಟರಿ ಕಾರ್ಯಾಚರಣೆಗಳನ್ನು ನಡೆಸಿದರು.
- ಪಾಕಿಸ್ತಾನ ಸರ್ಕಾರ 'ಆಜಾದ್ ಕಾಶ್ಮೀರ' ಎಂದು ಕರೆಯುವ ಪಾಕ್ ಆಕ್ರಮಿತ ಕಾಶ್ಮೀರದ ಸೈನ್ಯಬಲವನ್ನು ಹೆಚ್ಚಿಸಿತು.
- ಚೀನಾದೊಂದಿಗೆ ಆರ್ಥಿಕ ಮತ್ತು ಮಿಲಿಟರಿ ಸಹಕಾರದ ಒಪ್ಪಂದವನ್ನೂ ಮಾಡಿಕೊಂಡಿತು.

ವಿಶ್ವಸಂಸ್ಥೆಯ ಮಧ್ಯಸ್ಥಿಕೆಯಿಲ್ಲದೇ ಹೋಗಿದ್ದರೆ ಪಾಕಿಸ್ತಾನಕ್ಕೆ ಸಂಪೂರ್ಣ ಶರಣಾಗತಿಯ ಹೊರತು ಅನ್ಯ ಮಾರ್ಗವೇ ಇರುತ್ತಿರಲಿಲ್ಲ. ವಿಶ್ವಸಂಸ್ಥೆಯ ಒತ್ತಡದಿಂದಾಗಿ ಭಾರತ ಕದನ ವಿರಾಮಕ್ಕೆ ಒಪ್ಪಿತು. ಯುದ್ಧ ನಿರ್ಣಾಯಕ ಪರಿಣಾಮ ಕಾಣದಿದ್ದರೂ ಭಾರತ ಶಕ್ತಿಶಾಲಿಯಾಗಿ ಹೊರಹೊಮ್ಮಿತು.

## ಯುದ್ಧೋತ್ತರ

ಸಂಘರ್ಷವಿರಾಮದ ನಂತರ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿ ಮತ್ತು ಜನರಲ್ ಅಯೂಬ್ ಖಾನ್ ಸೋವಿಯತ್ ಯೂನಿಯನ್‌ನ ತಾಷ್ಕೆಂಟ್‌ನಲ್ಲಿ 'ತಾಷ್ಕೆಂಟ್ ಒಪ್ಪಂದ'ಕ್ಕೆ ಸಹಿ ಹಾಕಿದರು. ಇದರ ಅನ್ವಯ ಎರಡೂ ಪಕ್ಷಗಳು ತಮ್ಮ ತಮ್ಮ ವಶದಲ್ಲಿರುವ ಪ್ರದೇಶಗಳಿಂದ ಹಿಂತೆಗೆಯಬೇಕು ಮತ್ತು ಯುದ್ಧಪೂರ್ವ ಆಗಸ್ಟ್ ಸ್ಥಿತಿಗೆ ಮರಳಬೇಕು ಎನ್ನುವ ಷರತ್ತಿಗೆ ಒಪ್ಪಿದವು. ಇದರರ್ಥ ಪಾಕಿಸ್ತಾನಿ ನುಸುಳುಕೋರರು ದಾಟಿಬಂದ ಆಯಕಟ್ಟಿನ ಹಾಜಿ ಪೀರ್ ಪಾಸ್‌ನ ನಿಯಂತ್ರಣ ಮೊದಲಾದ ಅನೇಕ ತಾಂತ್ರಿಕ ಲಾಭಗಳನ್ನು ಭಾರತ ಕಳೆದುಕೊಂಡಿತು. ತಾಷ್ಕೆಂಟ್‌ನಲ್ಲಿ ಪ್ರಧಾನಿ ಶಾಸ್ತ್ರಿಯವರ ಹಠಾತ್ ಮೃತ್ಯುವಿನಿಂದ ತಾಷ್ಕೆಂಟ್ ಭಾರತದ ಪಾಲಿಗೆ ಕಹಿಯಾಯಿತು.

1965ರ ಯುದ್ಧದ ನಂತರ ನಡೆದ ಇನ್ನೆರಡು ಪಾಕಿಸ್ತಾನಕ್ಕೆ ಸಂಬಂಧಿಸಿದ ಬೆಳವಣಿಗೆಗಳು ಮಹತ್ವದ್ದಾಗಿವೆ. ಪಾಕಿಸ್ತಾನದೊಂದಿಗೆ ರಕ್ಷಣಾ ಸಹಕಾರ ಒಪ್ಪಂದ ಹೊಂದಿದ್ದ ಅಮೆರಿಕ ಯುದ್ಧದಲ್ಲಿ ತಟಸ್ಥ ಧೋರಣೆಯನ್ನು ಅನುಸರಿಸಿತು. ಇದರಿಂದ ಪಾಕಿಸ್ತಾನ ಮತ್ತು ಅಮೆರಿಕದ ಸಂಬಂಧಗಳು ಸ್ವಲ್ಪ ಹಳಸಿದುದು ಒಂದಾದರೆ, ಪಾಠಕಲಿತ ಪಾಕಿಸ್ತಾನ ಚೀನಾ ಮತ್ತು ಸೋವಿಯತ್‌ಗಳ ಸಖ್ಯವನ್ನು ಬೆಳೆಸುವತ್ತ ಹೆಜ್ಜೆಯಿಟ್ಟಿತು. ಹಾಗೆಯೇ ಸೋಲಿನ ಬಾಗಿಲಿಗೆ ಬಂದು ನಿಂತರೂ ತಾನೇ ಯುದ್ಧದಲ್ಲಿ ವಿಜಯಿ ಎಂದು ಪಾಕಿಸ್ತಾನ ಹೇಳಿಕೊಳ್ಳುತ್ತಿರುವುದು ಇನ್ನೊಂದು ವಿಪರ್ಯಾಸ.

1965ರ ಯುದ್ಧವು ಅತ್ಯಂತ ಕಷ್ಟಕರ ಸನ್ನಿವೇಶದಲ್ಲಿ ಭಾರತದ ಮೇಲೆ ಅನಿವಾರ್ಯವಾಗಿ ಹೇರಲ್ಪಟ್ಟದ್ದಾದರೂ ಭಾರತ ಸಂದರ್ಭೋಚಿತವಾಗಿ ಎದುರಿಸಿತು. ಈ ಸಂಘರ್ಷದ ಗೆಲುವು 1962ರಲ್ಲಿ ಚೀನಾ ವಿರುದ್ಧದ ಸೋಲಿನಿಂದಾದ ಸಾಮರಿಕ, ಆರ್ಥಿಕ ಆಘಾತದಿಂದ ಚೇತರಿಸಿಕೊಂಡು ಹೊಸ ಆತ್ಮವಿಶ್ವಾಸ ಮೂಡಿಸುವಲ್ಲಿ ಸಹಕಾರಿಯಾಯಿತು. ಜಮ್ಮು–ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದು ಒತ್ತಿ ಹೇಳುವುದರ ಜೊತೆಗೆ ಭಾರತ ತನ್ನ ನೆಲದ ಯಾವುದೇ ಅತಿಕ್ರಮಣವನ್ನು ಲಘುವಾಗಿ ಪರಿಗಣಿಸುವುದಿಲ್ಲ ಎನ್ನುವ ಸಂದೇಶವನ್ನು ವಿಶ್ವಕ್ಕೆ ಸಾರಿತು. ಹಾಗೆಯೇ ಈ ವಿಜಯವು 1971ರ ಯುದ್ಧದಲ್ಲಿ ಪಾಕಿಸ್ತಾನ ಸೈನ್ಯ ಸಂಪೂರ್ಣ ನೆಲಕಚ್ಚಿ ಶರಣಾಗುವ ಘಟನೆಗೆ ಮುನ್ನುಡಿಯಾಯಿತು.

# ಜನಗಣತಿ: ಹಿಂದೂಗಳ ಸಂಖ್ಯೆ ಇಳಿಮುಖ; ಮುಸ್ಲಿಂ ಜನಸಂಖ್ಯೆ ಏರಿಕೆ

**2011ರ ಜನಗಣತಿಯ ಅಧಿಕೃತ ಮಾಹಿತಿ ಇದೀಗ ಹೊರಬಂದಿದ್ದು, ಕಳೆದ ಹತ್ತು ವರ್ಷಗಳಲ್ಲಿ (2001–2011) ದೇಶದಲ್ಲಿ ಮುಸ್ಲಿಮರ ಸಂಖ್ಯೆ ಗಣನೀಯವಾಗಿ ಹೆಚ್ಚಿದ್ದರೆ, ಹಿಂದೂಗಳ ಸಂಖ್ಯೆಯಲ್ಲಿ ಕುಸಿತ ಕಂಡುಬಂದಿದೆ. ಇದೇ ಮೊತ್ತಮೊದಲ ಬಾರಿಗೆ ಹಿಂದೂ ಜನಸಂಖ್ಯೆ ಶೇ. 80ರ ಕೆಳಗಿಳಿದಿದೆ. ಈ ಜನಸಂಖ್ಯಾ ವರದಿಯ ಕುರಿತ ಕೆಲ ಅಂಶಗಳು:**

- 2011ರ ಜನಗಣತಿ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ 121.09 ಕೋಟಿ. ಇದರಲ್ಲಿ ಹಿಂದೂಗಳ ಪ್ರಮಾಣ 96.63 ಕೋಟಿ (79.8%), ಮುಸ್ಲಿಮರು 17.22 ಕೋಟಿ (14.2%), ಕ್ರೈಸ್ತರು 2.78 ಕೋಟಿ (2.3%), ಸಿಖ್ಖರು 2.08 ಕೋಟಿ (1.7%), ಬೌದ್ಧರು 0.84 ಕೋಟಿ (0.7%), ಜೈನರು 0.45 ಕೋಟಿ (0.4%) ಮತ್ತು ಪಾರ್ಸಿ ಹಾಗೂ ಇತರ ಧರ್ಮದವರು 0.79 ಕೋಟಿ (0.7%), ಧರ್ಮ ತಿಳಿಸದವರು 0.29 ಕೋಟಿ (0.2%).
- ಕಳೆದ 10 ವರ್ಷಗಳಲ್ಲಿ (2001–2011) ಮುಸ್ಲಿಮರ ಜನಸಂಖ್ಯೆ 0.8% ಹೆಚ್ಚಳ ಕಂಡಿದ್ದು 17.22 ಕೋಟಿ ತಲುಪಿದೆ. ಇದೇ ವೇಳೆ ಹಿಂದೂಗಳ ಜನಸಂಖ್ಯೆ 0.7% ಕಡಿಮೆಯಾಗಿದ್ದು 96.63 ಕೋಟಿಗೆ ತಲುಪಿದೆ. ಇನ್ನು ಸಿಖ್ಖರ ಜನಸಂಖ್ಯೆಯಲ್ಲಿ 0.2% ಕಡಿತವಾಗಿದೆ, ಬೌದ್ಧರ ಜನಸಂಖ್ಯೆಯಲ್ಲೂ ಸಹ 0.1% ಕಡಿತವಾಗಿದೆ.
- **ಅಸ್ಸಾಂನ 9 ಜಿಲ್ಲೆಗಳಲ್ಲಿ ಮುಸ್ಲಿಮರೇ ಬಹುಸಂಖ್ಯಾತರು! :** ಮುಸ್ಲಿಮರ ಸಂಖ್ಯೆ ಅತಿ ಹೆಚ್ಚು ಏರಿಕೆಯಾಗಿರುವುದು ಬಾಂಗ್ಲಾ ಅಕ್ರಮ ವಲಸಿಗರ ಸಮಸ್ಯೆ ಎದುರಿಸುತ್ತಿರುವ ಅಸ್ಸಾಂನಲ್ಲಿ. ಇದೀಗ ಅಲ್ಲಿನ ಮುಸ್ಲಿಮ್ ಜನಸಂಖ್ಯೆ ಶೇ. 34.2ಕ್ಕೇರಿದೆ (2001ರಲ್ಲಿ ಶೇ. 30.9). ಮಾತ್ರವಲ್ಲದೇ ಅಸ್ಸಾಂನ ಒಟ್ಟು 27 ಜಿಲ್ಲೆಗಳಲ್ಲಿ 9 ಜಿಲ್ಲೆಗಳಲ್ಲಿ ಮುಸ್ಲಿಮರೇ ಬಹುಸಂಖ್ಯಾತರಾಗಿದ್ದಾರೆ. 2001ರ ಜನಸಂಖ್ಯಾ ಏರಿಕೆ ಪ್ರಮಾಣಕ್ಕಿಂತ ಈ ಭಾರಿ ಪ. ಬಂಗಾಳದಲ್ಲಿ ಶೇ. 1.8, ಉತ್ತರಾಖಂಡದಲ್ಲಿ ಶೇ. 2, ಕೇರಳದಲ್ಲಿ ಶೇ. 1.9, ಗೋವಾದಲ್ಲಿ ಶೇ. 1.6ರಷ್ಟು ಮುಸ್ಲಿಮರ ಜನಸಂಖ್ಯೆ ಹೆಚ್ಚಳವಾಗಿದೆ.
- ರಾಜ್ಯಗಳ ಪೈಕಿ ಅತಿ ಹೆಚ್ಚು ಮುಸ್ಲಿಮರಿರುವುದು ಜಮ್ಮು–ಕಾಶ್ಮೀರದಲ್ಲಿ. ಅಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಂ ಪಾಲು ಶೇ. 68.3. ಕೇಂದ್ರಾಡಳಿತ ಪ್ರದೇಶಗಳ ಪೈಕಿ ಅತಿ ಹೆಚ್ಚು ಮುಸಲ್ಮಾನರನ್ನು (ಶೇ.96.2) ಲಕ್ಷದ್ವೀಪ ಹೊಂದಿದೆ.
- **ಮಹಿಳೆಯರ ಅನುಪಾತ ಹೆಚ್ಚಳ:** ಕಳೆದ ದಶಕದಲ್ಲಿ ರಾಜ್ಯದ ಸರಾಸರಿ ಲಿಂಗಾನುಪಾತವು ಹೆಚ್ಚಳವಾಗಿದೆ. ರಾಜ್ಯದಲ್ಲಿ ಮಹಿಳೆಯರ ಸಂಖ್ಯೆ ದೇಶದ ಸರಾಸರಿಗಿಂತ ಹೆಚ್ಚು ಇದೆ. ದೇಶದಲ್ಲಿ ಸಾವಿರ ಪುರುಷರಿಗೆ 943 ಮಹಿಳೆಯರಿದ್ದರೆ, ರಾಜ್ಯದಲ್ಲಿ ಈ ಅನುಪಾತ 973 ಇದೆ. 2001ರ ಜನಗಣತಿಯಲ್ಲಿ ರಾಜ್ಯದಲ್ಲಿ ಲಿಂಗಾನುಪಾತ 965 ಇತ್ತು. ಆದರೆ ಆರು ವರ್ಷದೊಳಗಿನ ಮಕ್ಕಳ ಸಂಖ್ಯೆಯನ್ನು ಪರಿಗಣಿಸಿದರೆ, ಲಿಂಗಾನುಪಾತ ಈಗಲೂ ನಿರಾಶಾದಾಯಕವಾಗಿದೆ.

**ಧರ್ಮಗಳ ಜನಸಂಖ್ಯೆ ಏರಿಕೆ ಪ್ರಮಾಣ (ಶೇಕಡಾವಾರು)**

| | |
|---|---|
| ಮುಸ್ಲಿಮರು | 24.6 |
| ಹಿಂದೂಗಳು | 16.8 |
| ಕ್ರೈಸ್ತರು | 15.5 |
| ಸಿಖ್ಖರು | 8.4 |
| ಬೌದ್ಧರು | 6.1 |
| ಜೈನರು | 5.4 |

# ಶುಕ್ರವಾಡಿ : ರಾಜ್ಯದ ಮೊದಲ ಸೌರಗ್ರಾಮ





ಕಲಬುರ್ಗಿಯಿಂದ ಸುಮಾರು 60 ಕಿ.ಮೀ ದೂರದಲ್ಲಿರುವ ಆಳಂದ ತಾಲ್ಲೂಕಿನ ಶುಕ್ರವಾಡಿ ಗ್ರಾಮವು ಈ ಹಿಂದೆ ಬಸ್ಸುಗಳು ಬಾರದ, ಮೂಲಸೌಲಭ್ಯಗಳಿಲ್ಲದ ಕುಗ್ರಾಮ ಎಂಬ ಅಪಖ್ಯಾತಿಗೆ ಒಳಗಾಗಿತ್ತು. ಆದರೀಗ 'ಸೌರ ಬೀದಿದೀಪ'ಗಳನ್ನು ಅಳವಡಿಸಿಕೊಂಡ ರಾಜ್ಯದ ಮೊದಲ ಗ್ರಾಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಗ್ರಾಮದ ಹನುಮಾನ್ ಮಂದಿರ ಮುಂಭಾಗದಲ್ಲಿರುವ ಗ್ರಾಮ ಪಂಚಾಯಿತಿಗೆ ಸೇರಿದ ಕಟ್ಟಡದ ಮೇಲ್ಭಾಗದಲ್ಲಿ ಸೌರ ಫಲಕಗಳನ್ನು ಅಳವಡಿಸಲಾಗಿದ್ದು, ಕಟ್ಟಡದ ಒಳಗೆ ಕೇಂದ್ರೀಕೃತ ಸೌರ ಘಟಕ ಸ್ಥಾಪಿಸಲಾಗಿದೆ. ಇಲ್ಲಿ 4 ಕಿ.ವಾಟ್ ಸಾಮರ್ಥ್ಯದ ಸೌರವಿದ್ಯುತ್ ಉತ್ಪಾದನೆಯಾಗುತ್ತದೆ. ಗ್ರಾಮದ ಮುಖ್ಯರಸ್ತೆ ಸೇರಿದಂತೆ ಊರ ಒಳಗಿನ ರಸ್ತೆಬದಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ (ಆರ್‌ಡಿಪಿಆರ್) ಇಲಾಖೆ ವತಿಯಿಂದ 15 ಲಕ್ಷ ವೆಚ್ಚದಲ್ಲಿ 50 ಸೌರ ಬೀದಿದೀಪಗಳನ್ನು ಅಳವಡಿಸಲಾಗಿದೆ. ಈ ಬೀದಿ ದೀಪಗಳಿಗೆ ಸೌರಘಟಕದಿಂದ ನೇರಸಂಪರ್ಕ ಕಲ್ಪಿಸಲಾಗಿದೆ. ಸಂಜೆ 6ಗಂಟೆಗೆ ತನ್ನಿಂದ ತಾನೇ ಹೊತ್ತಿಕೊಳ್ಳುವ ದೀಪಗಳು ಬೆಳಿಗ್ಗೆ 6 ಗಂಟೆಗೆ ಬಂದ್ ಆಗುತ್ತವೆ. ಇದರಿಂದ ಇಡೀ ಗ್ರಾಮ 12 ಗಂಟೆಗಳ ಕಾಲ ನವವಧುವಿನಂತೆ ಕಂಗೊಳಿಸುತ್ತಿದೆ.

ಮನೆಗಳಲ್ಲಿ ಶೌಚಾಲಯ ಕಟ್ಟಿಸಿಕೊಳ್ಳುವಂತೆ ಮಾಡಿದ ಮನವಿಗೆ ಹಿಂಜರಿದವರೇ ಹೆಚ್ಚು. ಸಹಾಯಧನ ಹೆಚ್ಚಿಸಿದರೂ ಬಹುತೇಕರು ಆಸಕ್ತಿ ತೋರಲಿಲ್ಲ. ಆಗ ಹುಟ್ಟಿಕೊಂಡಿದ್ದೇ ಸೌರದೀಪದ ಪರಿಕಲ್ಪನೆ. ಶೌಚಾಲಯ ಕಟ್ಟಿಸಿಕೊಂಡರೆ ಮನೆಗೊಂದು ಸೌರ ವಿದ್ಯುತ್‌ದೀಪ ನೀಡಲಾಗುವುದು ಎಂಬ ಭರವಸೆ ನೀಡಲಾಯಿತು. ಇದರಿಂದ ಖುಷಿಯಾದ ಗ್ರಾಮಸ್ಥರು ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡರು. ಆದರೆ, ಪ್ರತಿಯೊಂದು ಮನೆಗೂ ಸೌರವಿದ್ಯುತ್ ಸಂಪರ್ಕ ಕೊಡುವುದು ಕಷ್ಟಸಾಧ್ಯ ಎಂದರಿತು ಬೀದಿ ದೀಪಗಳನ್ನು ಅಳವಡಿಸುವ ಯೋಜನೆ ರೂಪಿಸಿ, ಕಾರ್ಯಗತಗೊಳಿಸಲಾಯಿತು.

**ಬಯಲು ಶೌಚಮುಕ್ತ ಗ್ರಾಮ:** 1,200 ಜನಸಂಖ್ಯೆ ಇರುವ ಶುಕ್ರವಾಡಿಯಲ್ಲಿ 147 ಮನೆಗಳಿದ್ದು, ಪ್ರತಿ ಮನೆಗಳಲ್ಲೂ ಸುಸಜ್ಜಿತ ಶೌಚಾಲಯಗಳನ್ನು ಕಾಣಬಹುದು. ಗ್ರಾಮಸ್ಥರ ಒಗ್ಗಟ್ಟು, ನೈರ್ಮಲ್ಯ ಕಾಳಜಿಯಿಂದಾಗಿ ಇದು ಸಾಧ್ಯವಾಗಿದೆ. ಇದರಿಂದಾಗಿ ಈ ಗ್ರಾಮ ಬಯಲು ಶೌಚಮುಕ್ತ ಗ್ರಾಮ ಎಂಬ ಹಿರಿಮೆಯನ್ನು ತನ್ನದಾಗಿಸಿಕೊಂಡಿದೆ. ಜೊತೆ ಜೊತೆಗೆ ಇದೀಗ ರಾಜ್ಯದ ಮೊದಲ 'ಸೌರಗ್ರಾಮ' ಎಂಬ ಹಿರಿಮೆಗೂ ಈ ಊರು ಪಾತ್ರವಾಗಿದೆ.

ನೆಲದ ಮಾತು

# ತೆಂಗಿನ ನಾರು ಬಳಕೆ ನೂರಾರು

ಎಳೆಯದಿದ್ದಾಗ ಎಳನೀರು, ಬಲಿತರೆ ತೆಂಗಿನಕಾಯಿ, ಒಣಗಿದರೆ ಕೊಬ್ಬರಿ ಮತ್ತೆ ಕೊಬ್ಬರಿಎಣ್ಣೆ. ಕಸಗುಡಿಸಲು ಪೊರಕೆ, ಮದುವೆಗೆ ಚಪ್ಪರ, ಹೊಲ–ಗದ್ದೆಗಳಿಗೆ ಗೊಬ್ಬರ, ಮನೆಗಳಿಗೆ ಉರುವಲು... ಹೀಗೆ ತೆಂಗಿನ ಉಪಯೋಗಗಳು ಅನೇಕ. ತೆಂಗಿನ ನಾರೂ ಇದಕ್ಕೆ ಹೊರತಲ್ಲ. ತೆಂಗಿನ ನಾರಿನಿಂದ ಈಗಾಗಲೇ ಬಗೆ ಬಗೆಯ ಉತ್ಪನ್ನಗಳನ್ನು ತಯಾರಿಸಿರುವ ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ, ಪ್ಲಾಸ್ಟಿಕ್ ಉತ್ಪನ್ನಗಳಿಗೆ ಪರ್ಯಾಯವಾಗಿ ಪರಿಸರ ಸ್ನೇಹಿ ತೆಂಗಿನ ನಾರಿನ ಟ್ರೇ, ಫೋಟೊ ಫ್ರೇಮ್, ಮಂಚ ಹಾಗೂ ಶಾಲಾ ಡೆಸ್ಕ್‌ಗಳನ್ನು ಅಭಿವೃದ್ಧಿಪಡಿಸಿದೆ. ಇತರ ಸಂಸ್ಥೆಗಳ ಉತ್ಪನ್ನಗಳಾದ ಹ್ಯಾಂಗಿಂಗ್ ಪಾಟ್, ನರ್ಸರಿ ಪಾಟ್, ಹಕ್ಕಿಯ ಗೂಡುಗಳಿಗೆ ಮಾರುಕಟ್ಟೆ ಸೌಲಭ್ಯ ಕಲ್ಪಿಸಿದೆ.

ಇದಕ್ಕಾಗಿ ನಿಗಮವು ಪ್ರತಿ ಒಂದು ಸಾವಿರ ತೆಂಗಿನ ಸಿಪ್ಪೆಯನ್ನು ರೂ. 600ರಂತೆ ಸ್ಥಳೀಯವಾಗಿ ರೈತರಿಂದಲೇ ಖರೀದಿಸುತ್ತದೆ. ಇದರಿಂದ ರೈತರಿಗೂ ಆದಾಯದ ಮೂಲ ಮತ್ತು ಗ್ರಾಮೀಣ ಪ್ರದೇಶದಲ್ಲಿ ಒಂದಷ್ಟು ಜನರಿಗೆ ಉದ್ಯೋಗಾವಕಾಶಕ್ಕೂ ದಾರಿಯಾಗಿದೆ. ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಗಂಡಸಿಯಲ್ಲಿ ತೆಂಗಿನ ನಾರಿನ ಟ್ರೇ ತಯಾರಿಕೆ ಘಟಕ ಕಳೆದ ಮೂರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಈ ಘಟಕದಲ್ಲಿ 32 ಮಂದಿ ಕೆಲಸ ನಿರ್ವಹಿಸುತ್ತಿದ್ದು, ಪ್ರತಿದಿನ 200ಕ್ಕೂ ಹೆಚ್ಚು ತೆಂಗಿನ ನಾರಿನ ಟ್ರೇಗಳನ್ನು ತಯಾರಿಸುತ್ತಿದ್ದಾರೆ. ಚನ್ನಪಟ್ಟಣ ತಾಲ್ಲೂಕಿನ ಕುಂತೂರುದೊಡ್ಡಿಯಲ್ಲಿ ಫೋಟೊ ಫ್ರೇಮ್ ತಯಾರಿಕೆ ಘಟಕವಿದ್ದು, 40ಕ್ಕೂ ಹೆಚ್ಚು ಜನರು ಇಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ತೆಂಗಿನ ನಾರು ಮತ್ತು ರೆಸಿನ್ ಮಿಶ್ರಣ ಮಾಡಿ 2 ಮಿ.ಮೀ ತೆಂಗಿನ ನಾರಿನ ಹಾಳೆಯನ್ನು ತಯಾರಿಸಿಕೊಳ್ಳುತ್ತಾರೆ. ಬಳಿಕ ಅದನ್ನು ಮರದ ಬೋರ್ಡ್‌ಗೆ ಅಳವಡಿಸುತ್ತಾರೆ. ನಂತರದಲ್ಲಿ ನಿಗಮವು ಆಯ್ದ ಚಿತ್ರಗಳನ್ನು ಎಚ್‌ಡಿ ಸ್ಕ್ರೀನ್ ಪ್ರಿಂಟಿಂಗ್‌ಗೆ ನೀಡುತ್ತದೆ. ಸುಂದರವಾದ ಕಟ್ಟುಗಳನ್ನು ಕಟ್ಟಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತದೆ.

ಶಾಲಾ ಮೇಜುಗಳು, ಮಂಚ, ಕಂಪ್ಯೂಟರ್ ಟೇಬಲ್‌ಗಳ ತಯಾರಿಕೆಯಲ್ಲೂ ತೆಂಗಿನ ನಾರು ಮಿಶ್ರಿತ ಬೋರ್ಡ್‌ಗಳನ್ನು ಬಳಸಲಾಗುತ್ತಿದೆ. ಪ್ರತಿ ಬೋರ್ಡ್‌ನಲ್ಲಿ ಶೇಕಡಾ 20ರಿಂದ 25ರಷ್ಟು ತೆಂಗಿನ ನಾರು ಬಳಸುವುದರಿಂದ ಅರಣ್ಯದ ಮೇಲಿನ ಅವಲಂಬನೆಯೂ ಕಡಿಮೆಯಾಗಲಿದೆ. ತಮಿಳುನಾಡಿನ ವೆಲ್ಲೂರಿನಲ್ಲಿ ತಯಾರಾಗುವ ತೆಂಗಿನ ನಾರಿನ ಹ್ಯಾಂಗಿಂಗ್ ಕುಂಡ ಮತ್ತು ನರ್ಸರಿ ಕುಂಡಗಳಿಗೆ ನಿಗಮವೇ ಮಾರುಕಟ್ಟೆ ಸೌಲಭ್ಯ ಒದಗಿಸುತ್ತಿದೆ. ಬಹಳ ಹೊತ್ತಿನವರೆಗೆ ನೀರನ್ನು ಹಿಡಿದಿಟ್ಟುಕೊಳ್ಳಬಲ್ಲ ಸಾಮರ್ಥ್ಯ ಈ ಕುಂಡಗಳಿಗೆ ಇರುವುದರಿಂದ ಸಸ್ಯಗಳಿಗೆ ಸ್ನೇಹಿತ. ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ನಾರಿನ ಕುಂಡಗಳನ್ನು ಬಳಸುವಂತೆ ಅರಣ್ಯ, ತೋಟಗಾರಿಕೆ ಮತ್ತು ಕೃಷಿ ಇಲಾಖೆಗಳಿಗೂ ನಿಗಮ ಸಲಹೆ ನೀಡಿದೆ.

**ಪರಿಸರ ಸಮತೋಲನ:** 'ತೆಂಗಿನ ನಾರು ಪರಿಸರಸ್ನೇಹಿ. ಇದರ ಉತ್ಪನ್ನಗಳಿಂದ ಯಾವುದೇ ಅಡ್ಡ ಪರಿಣಾಮಗಳಿಲ್ಲ. ಪ್ಲಾಸ್ಟಿಕ್ ವಸ್ತುಗಳ ಬದಲಿಗೆ ತೆಂಗಿನ ನಾರಿನ ಟ್ರೇ, ಮಂಚ, ಡೆಸ್ಕ್, ಹ್ಯಾಂಗಿಂಗ್ ಕುಂಡ ಮತ್ತು ನರ್ಸರಿ ಉತ್ಪನ್ನಗಳನ್ನು ಬಳಸುವುದು ಆರೋಗ್ಯದ ದೃಷ್ಟಿಯಿಂದ ಒಳಿತು ಹಾಗೂ ತೆಂಗಿನ ನಾರಿಗೆ ಉಷ್ಣ ನಿರೋಧಕ ಗುಣ ಇರುವುದರಿಂದ ದೀರ್ಘ ಕಾಲದವರೆಗೆ ನೀರಿನ ಅಂಶವನ್ನು ಹಿಡಿದಿಟ್ಟುಕೊಳ್ಳಬಲ್ಲದು. ಇದರಿಂದ ಗಿಡಗಳೂ ಸೊಂಪಾಗಿ ಬೆಳೆಯುತ್ತವೆ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪರಿಸರ ಸಮತೋಲನಕ್ಕೆ ಸಹಕರಿಸಿದಂತಾಗಲಿದೆ ಎನ್ನುತ್ತಾರೆ ತೆಂಗಿನ ನಾರು ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಚ್. ರಾಮಕೃಷ್ಣೇಗೌಡ.

# ಕಲಾಂ: ಬಿಟ್ಟುಹೋದ ಆದರ್ಶ

ಅದು 2014ರ ಆಗಸ್ಟ್ ತಿಂಗಳು. ಸೌಭಾಗ್ಯ ವೆಟ್ ಗ್ರೈಂಡರ್ (ರುಬ್ಬುವ ಯಂತ್ರ) ಕಾರ್ಖಾನೆಯ ವತಿಯಿಂದ ಕಾರ್ಯಕ್ರಮವೊಂದನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಅಬ್ದುಲ್ ಕಲಾಂ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳಿಗೆ ರುಬ್ಬುವ ಯಂತ್ರವೊಂದನ್ನು ಸ್ಮರಣಿಕೆ ಕೊಡುವುದು ಕಾರ್ಖಾನೆಯ ಸಂಪ್ರದಾಯ. ಅದರಂತೆ ಕಲಾಂ ಅವರಿಗೂ ನೀಡಲಾಯಿತು, ಆದರೆ ಅದನ್ನು ಸ್ವೀಕರಿಸಲು ನಿರಾಕರಿಸಿದ ಅವರು, ತಮ್ಮ ಕುಟುಂಬದವರೊಬ್ಬರಿಗೆ ರುಬ್ಬುವ ಯಂತ್ರದ ಆವಶ್ಯಕತೆ ಇದ್ದು, ಸೌಭಾಗ್ಯ ಸಂಸ್ಥೆಯವರು ರುಬ್ಬುವ ಯಂತ್ರದ ಬೆಲೆಯನ್ನು ತೆಗೆದುಕೊಳ್ಳುವುದಾದರೆ ಮಾತ್ರ ಸ್ಮರಣಿಕೆ ಸ್ವೀಕರಿಸುವುದಾಗಿ ಹೇಳಿದರು. ಅದರಂತೆ 2014ರ ಆಗಸ್ಟ್ 25ರ ದಿನಾಂಕವುಳ್ಳ ರೂ. 4850 ಬೆಲೆಯ ಚೆಕ್ಕನ್ನು ವ್ಯಕ್ತಿಯೊಬ್ಬರ ಮೂಲಕ ಸೌಭಾಗ್ಯ ಸಂಸ್ಥೆಗೆ ಕಳುಹಿಸಿದರು. ಕಲಾಂರಿಂದ ಹಣ ಪಡೆಯಲು ಒಲ್ಲದ ಸೌಭಾಗ್ಯ ಕಾರ್ಖಾನೆಯ ಆಡಳಿತ ನಿರ್ದೇಶಕ ವಿ. ಆದಿಕೇಶವನ್ ಒಲ್ಲದ ಮನಸ್ಸಿನಿಂದ ಚೆಕ್ಕನ್ನು ಸ್ವೀಕರಿಸಿ, ಚೆಕ್ಕನ್ನು ನಗದು ಗೊಳಿಸದೆ ಇರಲು ತೀರ್ಮಾನಿಸಿದರು.

ಆದರೆ ಚೆಕ್ ಬಹುದಿನಗಳಿಂದ ಬ್ಯಾಂಕಿಗೆ ಪ್ರಸ್ತುತಪಡಿಸದೆ ಇರುವುದನ್ನು ಗಮನಿಸಿದ ಕಲಾಂರು ತಮ್ಮ ಕಛೇರಿ ದೂರವಾಣಿ ಮೂಲಕ ಆದಿಕೇಶವನ್‌ರನ್ನು ಸಂಪರ್ಕಿಸಿ, ತಾವು ಚೆಕ್ಕನ್ನು ನಗದು ಗೊಳಿಸದಿರಲು ಕಾರಣವೇನೆಂದೂ, ಹಣವನ್ನು ಸ್ವೀಕರಿಸದಿದ್ದರೆ, ತಾವು ರುಬ್ಬುವ ಯಂತ್ರವನ್ನು ಹಿಂತಿರುಗಿಸಲು ಯೋಚಿಸಿರುವುದಾಗಿಯೂ ತಿಳಿಸಿ ಆದಷ್ಟು ಬೇಗ ಚೆಕ್ಕನ್ನು ಬ್ಯಾಂಕಿಗೆ ಪ್ರಸ್ತುತಪಡಿಸಿ ಹಣ ಪಡೆಯಬೇಕೆಂದು ನಯವಾಗಿ ವಿನಂತಿಸಿಕೊಂಡರು. ಇಕ್ಕಟ್ಟಿಗೆ ಸಿಲುಕಿದ ಆದಿಕೇಶವನ್, ನೆನಪಿಗೋಸ್ಕರ ಚೆಕ್‌ನ್ನು ಝೆರಾಕ್ಸ್ ಮಾಡಿಸಿ, ತಮ್ಮ ಅಂಗಡಿಯಲ್ಲಿ ತೂಗುಹಾಕಿ, ಒಲ್ಲದ ಮನಸ್ಸಿನಿಂದ ಚೆಕ್‌ನ್ನು ಬ್ಯಾಂಕ್‌ಗೆ ಪ್ರಸ್ತುತಪಡಿಸಿದರು. ಚೆಕ್ ಪ್ರಸ್ತುತಪಡಿಸಿದ್ದನ್ನು ಗಮನಿಸಿದ ಕಲಾಂ, ಹಣ ಸ್ವೀಕರಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುವ ಪತ್ರವೊಂದನ್ನು ಆದಿಕೇಶವನ್ ಅವರಿಗೆ ಕಳುಹಿಸಿದರು. ಕಲಾಮ್ ಅವರು ನೀಡಿದ ಚೆಕ್‌ನ ಪ್ರತಿ ಇಂದಿಗೂ ನಮ್ಮ ಅಂಗಡಿಯಲ್ಲಿ ಈ ಮಹಾನುಭಾವನ ಮೇರು ವ್ಯಕ್ತಿತ್ವದ ಸ್ಮರಣೆಗಾಗಿ ತೂಗಿ ಹಾಕಿರುವುದಾಗಿ ಆದಿಕೇಶವನ್ ಅವರು ನೆನಪಿಸಿಕೊಳ್ಳುತ್ತಾರೆ.

'ದಿ ನ್ಯೂ ಇಂಡಿಯನ್ ಎಕ್ಸಪ್ರೆಸ್' ಪತ್ರಿಕೆಯಲ್ಲಿ ಪ್ರಕಟ

**ಸಂಪಾದಕೀಯ ಸಹಕಾರ** ಸತ್ಯನಾರಾಯಣ ಶಾನುಬಾಗ್, ಪ್ರತಾಪ್ ಕೊಡಂಚ, ವಿನಾಯಕ ಅಣ್ಣಯ್ಯ, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

ನಕ್ಸಲ್ ಚಟುವಟಿಕೆಗಳನ್ನು ನಿಗ್ರಹಿಸುವ ಉದ್ದೇಶಕ್ಕಾಗಿ ಕರ್ನಾಟಕ, ಕೇರಳ ಮತ್ತು ತಮಿಳುನಾಡು ಗಡಿಭಾಗಗಳಲ್ಲಿ ಹೊಸದಾಗಿ ಮೂರು ನಕ್ಸಲ್ ನಿಗ್ರಹಪಡೆಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.




**ಆಕಾಶವಾಣಿ ಸಿದ್ಧಪಡಿಸಿರುವ 'ರಾಮಚರಿತಮಾನಸ'ದ ವಿಶೇಷ ಡಿಜಿಟಲ್ ಅವತರಣಿಕೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬಿಡುಗಡೆ ಮಾಡಿದರು. ಗೋಸ್ವಾಮಿ ತುಳಸಿದಾಸ್ ಅವರ ರಚನೆಗಳಲ್ಲಿ ಭೋಪಾಲ್ ಘರಾಣಾದ ಪ್ರಮುಖ ಹಾಡುಗಾರರು ಹಾಡಿದ ಹಾಡುಗಳನ್ನು ಆಕಾಶವಾಣಿ ಹಲವು ವರ್ಷಗಳಿಂದ ಪ್ರಸಾರ ಮಾಡುತ್ತಿದೆ. ಹಿಂದಿ ಭಾಷಿಗರಿರುವ ಪ್ರದೇಶಗಳಲ್ಲಿ ಇವು ನಿರಂತರವಾಗಿ ಪ್ರಸಾರವಾಗುತ್ತಿವೆ. ಇದೀಗ 'ರಾಮಚರಿತಮಾನಸ'ದ ಡಿಜಿಟಲ್ ಅವತರಣಿಕೆಯಿಂದ ಅದು ದೇಶದಲ್ಲಿನ ಶ್ರೋತೃಗಳನ್ನಲ್ಲದೆ, ವಿದೇಶಕ್ಕೂ ತಲುಪಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.**

ಕೇರಳದ ಪಂಬಾ ನದಿ ತೀರದಲ್ಲಿರುವ ಶಬರಿಮಲೆ ದೇವಸ್ಥಾನವು ರಾಷ್ಟ್ರೀಯ ಯಾತ್ರಾ ಕ್ಷೇತ್ರದ ಸ್ಥಾನಮಾನ ಪಡೆಯಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

**ಸರ್ವರಿಗೂ ಸೂರು ಯೋಜನೆ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು 9 ರಾಜ್ಯಗಳ 300ಕ್ಕೂ ಹೆಚ್ಚು ನಗರಗಳು ಹಾಗೂ ಪಟ್ಟಣಗಳನ್ನು ಗುರುತಿಸಿದೆ. ಛತ್ತೀಸಗಡದ 36, ಗುಜರಾತ್‌ನ 30, ಜಮ್ಮು–ಕಾಶ್ಮೀರದ 19, ಜಾರ್ಖಂಡ್‌ನ 15, ಕೇರಳದ 15, ಮಧ್ಯಪ್ರದೇಶದ 74, ಒರಿಸ್ಸಾದ 42, ರಾಜಸ್ಥಾನದ 40 ಹಾಗೂ ತೆಲಂಗಾಣದ 34 ಪಟ್ಟಣಗಳನ್ನು ಈ ಯೋಜನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ನಗರಪ್ರದೇಶದ ಅಂದಾಜು ಎರಡು ಕೋಟಿ ಬಡವರು ಮುಂದಿನ ಆರು ವರ್ಷಗಳಲ್ಲಿ ಸ್ವಂತ ಮನೆ ನಿರ್ಮಿಸಿಕೊಳ್ಳುವುದಕ್ಕೆ ವಸತಿ ಹಾಗೂ ನಗರ ಬಡತನ ನಿರ್ಮೂಲನಾ ಸಚಿವಾಲಯವು ರೂ. 2 ಲಕ್ಷ ಕೋಟಿಗೂ ಅಧಿಕ ನೆರವು ನೀಡಲಿದೆ.**



ಜುಲೈ 2ರಂದು ಆರಂಭಗೊಂಡು ಆಗಸ್ಟ್ 29 ರ ತನಕ ನಡೆದ ಪ್ರಸಕ್ತ ವರ್ಷದ ಪವಿತ್ರ ಅಮರನಾಥ ಯಾತ್ರೆಯಲ್ಲಿ 3.29 ಲಕ್ಷಕ್ಕೂ ಹೆಚ್ಚು ಯಾತ್ರಿಕರು ಹಿಮಲಿಂಗ ದರ್ಶನ ಮಾಡಿದ್ದಾರೆ. ಅಮರನಾಥ ಮಂದಿರ ಮಂಡಳಿಯ ಅಧ್ಯಕ್ಷರೂ ಆದ ಜಮ್ಮು–ಕಾಶ್ಮೀರ ರಾಜ್ಯಪಾಲ ಎನ್.ಎನ್. ವೋಹ್ರಾ ಅವರು ಯಾತ್ರೆಯ ಕೊನೆಯ ದಿನ ಅಮರನಾಥಕ್ಕೆ ತೆರಳಿ, ಯಾತ್ರೆ ಮಾರ್ಗದಲ್ಲಿನ ಶಿಬಿರಗಳನ್ನು ಸ್ವಚ್ಛಗೊಳಿಸುವಂತೆ ಮತ್ತು ಮುಂದಿನ ಯಾತ್ರೆಗಳನ್ನು ಇನ್ನಷ್ಟು ಚೆನ್ನಾಗಿ ವ್ಯವಸ್ಥೆ ಮಾಡಲು ಈ ವರ್ಷದ ಯಾತ್ರೆಯ ಅನುಭವವನ್ನು ಬಳಸಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು ಎಂದು ಮಂಡಳಿ ಮೂಲಗಳು ತಿಳಿಸಿವೆ.



**ಶ್ರೀಹರಿಕೋಟಾ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಭಾರತದ 25ನೇ ಭೂಸ್ಥಿರ ಸಂಪರ್ಕ ಉಪಗ್ರಹ 'ಜಿಸ್ಯಾಟ್–6', GSLV-Dನಿಂದ ಉಡಾವಣೆಗೊಂಡು ಯಶಸ್ವಿಯಾಗಿ ಕಕ್ಷೆಯನ್ನು ಸೇರಿದೆ. GSLV–D6ನಲ್ಲಿ ಕ್ರಯೋಜೆನಿಕ್ ಎಂಜಿನ್ ಅಳವಡಿಸಲಾಗಿದ್ದು, ಈ ಯಶಸ್ವಿ ಉಡಾವಣೆ ಭಾರತದ ಬಾಹ್ಯಾಕಾಶ ಯೋಜನೆಗಳಿಗೆ ಭದ್ರ ಬುನಾದಿ ಹಾಕಿದೆ ಎಂದು ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್‌ಕುಮಾರ್ ತಿಳಿಸಿದ್ದಾರೆ. ಇದು ಅವರು ಅಧ್ಯಕ್ಷರಾದ ನಂತರ ನಡೆದ ಮೊದಲ ಯಶಸ್ವಿ ಉಪಗ್ರಹ ಉಡಾವಣೆ. 2014ರ ಜನವರಿಯಲ್ಲಿ ಉಡಾವಣೆಯಾದ 'ಜಿಸ್ಯಾಟ್–14'ರಲ್ಲಿ ಮೊದಲ ಬಾರಿ ಕ್ರಯೋಜೆನಿಕ್ ಇಂಜಿನ್ ಅಳವಡಿಸಲಾಗಿತ್ತು. 400 ಕೋಟಿ ರೂ. ವೆಚ್ಚದಲ್ಲಿ ಸುಮಾರು 2 ದಶಕಗಳ ಕಾಲ ಕ್ರಯೋಜೆನಿಕ್ ತಂತ್ರಜ್ಞಾನವನ್ನು ದೇಶೀಯವಾಗಿ ಅಭಿವೃದ್ಧಿಪಡಿಸಲು ಖಗೋಳ ವಿಜ್ಞಾನಿಗಳು ಶ್ರಮಿಸಿದ್ದಾರೆ.**




ತಮ್ಮ ದೇಶದ ಶಿಕ್ಷಣ ಸಂಸ್ಥೆಗಳಲ್ಲಿ ಸಂಸ್ಕೃತವೂ ಸೇರಿದಂತೆ ಭಾರತೀಯ ಭಾಷೆಗಳನ್ನು ಬೋಧಿಸಲು ಜರ್ಮನಿ ಮುಂದಾಗಿದೆ. ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧ ಹಳಸಲು ಕಾರಣವಾಗಿದ್ದ ಜರ್ಮನ್ ಭಾಷಾ ವಿವಾದಕ್ಕೆ ಪರಿಹಾರ ರೂಪದಲ್ಲಿ ಜರ್ಮನಿ ಈ ನಿರ್ಧಾರಕ್ಕೆ ಬಂದಿದೆ ಎನ್ನಲಾಗಿದೆ. ಜರ್ಮನಿ ಪ್ರವಾಸದಲ್ಲಿರುವ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಅವರೊಂದಿಗೆ ಮಾತುಕತೆ ನಡೆಸಿದ ಜರ್ಮನಿಯ ವಿದೇಶಾಂಗ ಮತ್ತು ಶಿಕ್ಷಣ ಸಚಿವರು ಈ ವಿಷಯವನ್ನು ಪ್ರಕಟಿಸಿದರು. ಜೊತೆಗೆ ಗಂಗಾ ನದಿಯ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಳ್ಳಲು ಜರ್ಮನಿ ಉತ್ಸುಕವಾಗಿದೆ ಎಂದು ವಿದೇಶಾಂಗ ಸಚಿವ ವಾಲ್ಟರ್ ಅವರು ಸುಷ್ಮಾ ಅವರಿಗೆ ತಿಳಿಸಿದರು.

## ಸಾಲ ಬಯಸುವ ವಿದ್ಯಾರ್ಥಿಗಳಿಗೆ ವಿದ್ಯಾಲಕ್ಷ್ಮಿ ಜಾಲತಾಣ

VIDYA LAKSHMI
Fulfilling Educational Aspirations

ವಿದ್ಯಾರ್ಥಿಗಳಿಗೆ ಸುಲಭವಾಗಿ ಶೈಕ್ಷಣಿಕ ಸಾಲ ಒದಗಿಸುವ ನಿಟ್ಟಿನಲ್ಲಿ ಏಕೀಕೃತ ವ್ಯವಸ್ಥೆ ಜಾರಿಗೆ ತಂದಿರುವ ಕೇಂದ್ರ ಸರ್ಕಾರ, ವಿದ್ಯಾಲಕ್ಷ್ಮಿ ಎಂಬ ಜಾಲತಾಣವನ್ನು ಆರಂಭಿಸಿದೆ. ಇದು ಏಕಗವಾಕ್ಷಿ ವ್ಯವಸ್ಥೆಯಾಗಿದ್ದು, ಶಿಕ್ಷಣ ಸಾಲ ಬಯಸುವ ವಿದ್ಯಾರ್ಥಿಗಳು ಕೇವಲ ಒಂದು ಅರ್ಜಿಯ ಮೂಲಕ ವಿವಿಧ ಬ್ಯಾಂಕ್‌ಗಳಲ್ಲಿ ಲೋನ್‌ಗಾಗಿ ಕೋರಿಕೆ ಸಲ್ಲಿಸಿದಂತಾಗುತ್ತದೆ. ಆರ್ಥಿಕ ಸಮಸ್ಯೆಯಿಂದ ಯಾವೊಬ್ಬ ವಿದ್ಯಾರ್ಥಿಯೂ ಉನ್ನತ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸುವಂತಾಗಬಾರದು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಈ ನೂತನ ವೆಬ್‌ಪೋರ್ಟಲ್‌ಗೆ ಚಾಲನೆ ನೀಡಿದೆ. ಲೋನ್ ಪ್ರೋಸೆಸಿಂಗ್ ಸ್ಟೇಟಸ್ ಒದಗಿಸುವ ಸಲುವಾಗಿ ಸ್ಟೇಟ್‌ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್ ಸೇರಿದಂತೆ 5 ಬ್ಯಾಂಕ್‌ಗಳು ಈ ಜಾಲತಾಣದಲ್ಲಿ ಏಕೀಕೃತವಾಗಿವೆ. ಒಟ್ಟು 13 ಬ್ಯಾಂಕ್‌ಗಳ 22 ಮಾದರಿಯ ಶೈಕ್ಷಣಿಕ ಸಾಲ ವಿದ್ಯಾಲಕ್ಷ್ಮಿ ವೆಬ್‌ಪೋರ್ಟಲ್ ಮೂಲಕ ದೊರೆಯಲಿದೆ. ದೇಶಾದ್ಯಂತ ವಿದ್ಯಾರ್ಥಿಗಳು ಯಾವುದೇ ಬ್ಯಾಂಕ್‌ನಲ್ಲಿ ಲೋನ್ ಬಯಸಿ http://www.vidhyalakshmi.co.in ಜಾಲತಾಣದ ಮೂಲಕ ಅರ್ಜಿ ಸಲ್ಲಿಸಬಹುದು. ಬಜೆಟ್ ಭಾಷಣದ ವೇಳೆ ವಿತ್ತ ಸಚಿವ ಅರುಣ್ ಜೇಟ್ಲಿ ಘೋಷಿಸಿದ್ದ 'ಪ್ರಧಾನಮಂತ್ರಿ ವಿದ್ಯಾಲಕ್ಷ್ಮಿ ಕಾರ್ಯಕ್ರಮ (ಪಿಎಂವಿಎಲ್‌ಕೆ)'ದ ಅನುಸಾರ ಈ ವೆಬ್‌ಪೋರ್ಟಲ್ ಆರಂಭಿಸಲಾಗಿದೆ.

## ಸಾಲುದ್ದದ ಸುದ್ದಿಗಳು



**ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿ ವಿಶ್ವದ ಅತಿ ದೊಡ್ಡ ಸೋಲಾರ್ ವಿದ್ಯುತ್ ಘಟಕ ತಲೆ ಎತ್ತಲಿದೆ. 750 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಈ ಸೋಲಾರ್ ಘಟಕ ಸ್ಥಾಪನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ. ಪಾರಂಪರಿಕ ನಗರ ಮೈಸೂರು ಸೇರಿದಂತೆ ದೇಶದ 50 ನಗರಗಳನ್ನು 'ಸೋಲಾರ್ ಸಿಟಿ'ಯಾಗಿ ಅಭಿವೃದ್ಧಿಪಡಿಸುವ ಯೋಜನೆಯನ್ನು ಕೇಂದ್ರ ಸರ್ಕಾರ ಅನುಮೋದಿಸಿದೆ. ಮೈಸೂರು ಸೇರಿ 46 ನಗರಗಳನ್ನು ಸೋಲಾರ್ ಸಿಟಿಯಾಗಿಸಲು ಈಗಾಗಲೇ ಮಾಸ್ಟರ್‌ಪ್ಲಾನ್ ಕೂಡ ಸಿದ್ಧವಾಗಿದ್ದು, ಇನ್ನುಳಿದ ನಾಲ್ಕು ಪಟ್ಟಣಗಳ ಯೋಜನೆ ತಯಾರಿ ಕೊನೆಯ ಹಂತದಲ್ಲಿದೆ.**

ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ನಡೆದ ಭಾರತೀಯ ಸೇನೆ ಮತ್ತು ಉಗ್ರರ ನಡುವಿನ ಗುಂಡಿನ ಕಾಳಗದಲ್ಲಿ ನಾಲ್ವರು ಉಗ್ರರು ಬಲಿಯಾಗಿದ್ದು, ಪಾಕಿಸ್ತಾನದ ಒಬ್ಬ ಉಗ್ರನನ್ನು ಯೋಧರು ಜೀವಂತವಾಗಿ ಸೆರೆ ಹಿಡಿದಿದ್ದಾರೆ. ಜೀವಂತ ಸೆರೆ ಸಿಕ್ಕಿರುವ ಉಗ್ರ ಸಜ್ಜದ್ ಅಹ್ಮದ್ ಅಲಿಯಾಸ್ ಅಬು ಉಬಾದುಲ್ಲಾ (22) ನೈಋತ್ಯ ಪಾಕಿಸ್ತಾನದ ಬಲೂಚಿಸ್ತಾನ್ ಪ್ರಾಂತ್ಯದ ಮುಜಾಫರ್‌ಗರ್‌ನವನು ಎಂದು ಅಧಿಕಾರಿಗಳು ತಿಳಿಸಿದ್ದಾರೆ.



**ಕೇಂದ್ರ ಸರ್ಕಾರವು 2016ರ ಮಾರ್ಚ್ ವೇಳೆಗೆ ದೇಶದ ಆಯ್ದ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ 10 ಹೊಸ ಪರಿಸರ ಸ್ನೇಹಿ ಸೂಪರ್ ಕಂಪ್ಯೂಟರ್‌ಗಳನ್ನು ಸ್ಥಾಪಿಸಲು ತೀರ್ಮಾನಿಸಿದೆ. ಹೊಸ ಪರಿಸರ ಸ್ನೇಹಿ ಸೂಪರ್ ಕಂಪ್ಯೂಟರ್‌ಗಳು ಕಡಿಮೆ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿದ್ದು, ವಿದ್ಯುತ್ ಉಳಿತಾಯ ಮಾಡಲಿವೆ. ಒಟ್ಟು 73 ಸೂಪರ್ ಕಂಪ್ಯೂಟರ್‌ಗಳನ್ನು ಪರಿಸರ ಸ್ನೇಹಿ ತಂತ್ರಜ್ಞಾನ ಬಳಸಿ ನಿರ್ಮಿಸಲು ನಿರ್ಧರಿಸಿದ್ದು, ಇದಕ್ಕಾಗಿ 7 ವರ್ಷದ ಯೋಜನೆಯನ್ನು ರೂಪಿಸಲಾಗಿದೆ. ಮೊದಲ ಮೂರು ವರ್ಷದಲ್ಲಿ ಸೂಪರ್ ಕಂಪ್ಯೂಟರ್ ತಯಾರಿಸಲಾಗುವುದು ಮತ್ತು ನಂತರದ 4 ವರ್ಷಗಳಲ್ಲಿ ಅವುಗಳನ್ನು ಆಯ್ದ ಸ್ಥಳಗಳಲ್ಲಿ ಸ್ಥಾಪಿಸಲಾಗುವುದು, ಇದಕ್ಕಾಗಿ ಸರ್ಕಾರವು 4500 ಕೋಟಿ ರೂ. ಯೋಜನೆ ರೂಪಿಸಿದೆ ಎಂದು ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್‌ಡ್ ಕಂಪ್ಯೂಟರಿಂಗ್‌ನ ಡೈರೆಕ್ಟರ್ ಜನರಲ್ ಪ್ರೊಫೆಸರ್ ರಜತ್ ಮೋನ ತಿಳಿಸಿದ್ದಾರೆ.**



ಪ್ರಧಾನಿ ಮೋದಿ, ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ ಹಾಗೂ ಉಭಯ ರಾಷ್ಟ್ರಗಳ ಭದ್ರತಾ ಸಲಹೆಗಾರರ ನಡುವಿನ ನೇರ ದೂರವಾಣಿ ಸಂಭಾಷಣೆಗಾಗಿ ಹಾಟ್‌ಲೈನ್ ಆರಂಭವಾಗಿದೆ. ಹಾಟ್‌ಲೈನ್ ಎರಡು ರಾಷ್ಟ್ರಗಳ ಮುಖ್ಯಸ್ಥರ ನಡುವೆ ಸಂವಹನ ನಡೆಸಲು ಅತ್ಯಂತ ಸುರಕ್ಷಿತ ಟೆಲಿಫೋನ್ ಸಂಪರ್ಕವಾಗಿದೆ. ನೈಜ ಸಮಸ್ಯೆಗೆ ತಕ್ಷಣವೇ ಸ್ಪಂದಿಸಲು ಈ ವ್ಯವಸ್ಥೆ ನೆರವಾಗುತ್ತದೆ ಎಂದು ಶ್ವೇತಭವನದ ಅಧಿಕಾರಿಗಳು ತಿಳಿಸಿದ್ದಾರೆ. ರಷ್ಯಾ, ಬ್ರಿಟನ್, ಚೀನಾದ ಜತೆಗೆ ಅಮೆರಿಕ ಹಾಟ್‌ಲೈನ್ ಸೇವೆ ಹೊಂದಿದ್ದು, ಈ ಸೇವೆ ಪಡೆದ ನಾಲ್ಕನೇ ರಾಷ್ಟ್ರವಾಗಿ ಭಾರತ ಸೇರಿಕೊಂಡಿದೆ.

**ಅಂಗಾಂಗ ದಾನ ಮಾಡುವುದರಲ್ಲಿ ಮತ್ತು ಅಂಗಾಂಗ ಕಸಿ ಮಾಡುವುದರಲ್ಲಿ ತಮಿಳುನಾಡು ದೇಶದಲ್ಲೇ ಮೊದಲ ಸ್ಥಾನ ಪಡೆದಿದೆ. 2008ರಲ್ಲಿ ತಮಿಳುನಾಡಿನಲ್ಲಿ ಅಂಗಾಗ ದಾನ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ನಂತರ ಇದುವರೆಗೂ 683 ಜನರು ಅಂಗಾಂಗ ದಾನ ಮಾಡಿದ್ದು, ಅದನ್ನು ಸುಮಾರು 3000 ಫಲಾನುಭವಿಗಳಿಗೆ ಕಸಿ ಮಾಡಲಾಗಿದೆ. ಇದುವರೆಗೆ 144 ಹೃದಯ, 69 ಶ್ವಾಸಕೋಶ, 636 ಪಿತ್ತಜನಕಾಂಗ, 1233 ಕಿಡ್ನಿ, 4 ಪ್ಯಾಂಕ್ರಿಯಾಸ್, 618 ಹೃದಯ ಕವಾಟಗಳು, 1032 ಕಾರ್ನಿಯಾ ಮತ್ತು 22 ಜನರಿಗೆ ಚರ್ಮ ಕಸಿ ಮಾಡಲಾಗಿದೆ ಎಂದು ತಮಿಳುನಾಡು ಸರ್ಕಾರ ತಿಳಿಸಿದೆ. ಅಂಗಾಂಗ ಕಸಿಗಾಗಿ ನೋಂದಾವಣೆ ಮಾಡಿಕೊಳ್ಳಲು ತಮಿಳುನಾಡು ಸರ್ಕಾರ ಅಂಗಾಂಗ ಕಸಿ ಪ್ರಾಧಿಕಾರ ಸ್ಥಾಪಿಸಿದ್ದು, ಇದರ ಮೂಲಕ ಅರ್ಹ ಫಲಾನುಭವಿಗಳಿಗೆ ಅಂಗಾಂಗಗಳನ್ನು ಒದಗಿಸಲಾಗುತ್ತಿದೆ.**



## ನಿಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸಿ

ನಿಮ್ಮ ಮಕ್ಕಳನ್ನು ಕಡ್ಡಾಯವಾಗಿ ಸರ್ಕಾರಿ ಶಾಲೆಗಳಿಗೆ ಕಳುಹಿಸಿ. ಹೀಗೆಂದು ಅಲಹಾಬಾದ್ ಹೈಕೋರ್ಟ್ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಆದೇಶಿಸಿದೆ. ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ, ಶಾಲಾ ಕಟ್ಟಡಗಳ ದುಃಸ್ಥಿತಿ ಕುರಿತ ದೂರಿನ ವಿಚಾರಣೆ ನಡೆಸುತ್ತಿರುವ ಸಂದರ್ಭದಲ್ಲಿ ಅಲಹಾಬಾದ್ ಹೈಕೋರ್ಟ್ ಈ ಆದೇಶ ನೀಡಿದೆ. ಹೀಗೆ ಮಾಡಿದಾಗ ಮಾತ್ರ ಸರ್ಕಾರಿ ಶಾಲೆಗಳ ಮೂಲಸೌಕರ್ಯಗಳು ಸುಧಾರಿಸುತ್ತವೆ ಎಂದು ಅದು ಹೇಳಿದೆ.

ಅದೆಷ್ಟೇ ಪ್ರಯತ್ನಿಸಿದರೂ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಸುಧಾರಣೆಗೆ ಸರ್ಕಾರ ಹಾಗೂ ಸರ್ಕಾರಿ ಅಧಿಕಾರಿಗಳು ಗಮನಹರಿಸುತ್ತಿಲ್ಲವೆಂದು ಉಮೇಶ್ ಕುಮಾರ್ ಸಿಂಗ್ ಮತ್ತಿತರರು ಅಲಹಾಬಾದ್ ಹೈಕೋರ್ಟ್‌ನಲ್ಲಿ ದೂರುಗಳನ್ನು ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ಹೈಕೋರ್ಟ್, ಇನ್ನು 6 ತಿಂಗಳುಗಳ ಒಳಗಾಗಿ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಸಮಸ್ಯೆ ನೀಗಿಸಲು ಮುಂದಾಗುವ ಮೂಲಕ ಕನಿಷ್ಠ ಪಕ್ಷ ಮುಂದಿನ ಶೈಕ್ಷಣಿಕ ವರ್ಷದಿಂದಲಾದರೂ ಮಕ್ಕಳಿಗೆ ಉತ್ತಮ ವಾತಾವರಣದಲ್ಲಿ ವ್ಯಾಸಂಗ ಮಾಡಲು ಅವಕಾಶ ಮಾಡಿಕೊಡಬೇಕೆಂದು ಉತ್ತರಪ್ರದೇಶ ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಸೂಚಿಸಿತು. ಅಲ್ಲದೆ, 6 ತಿಂಗಳ ಬಳಿಕ ಮೂಲಸೌಕರ್ಯ ಸುಧಾರಣೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ತನಗೆ ವರದಿ ಸಲ್ಲಿಸುವಂತೆ ಆದೇಶಿಸಿದರು.



ಸಂವಿಧಾನಶಿಲ್ಪಿ ಡಾ॥ ಬಿ.ಆರ್. ಅಂಬೇಡ್ಕರ್ ಅವರ ಉತ್ತರ ಲಂಡನ್‌ನಲ್ಲಿನ ನಿವಾಸವನ್ನು ಮಹಾರಾಷ್ಟ್ರ ಸರ್ಕಾರ ಖರೀದಿಸಿದೆ. ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡ್‌ಗೆ ಬಂದ ಅಂಬೇಡ್ಕರ್ ಅವರು 1920ರಲ್ಲಿ ಈ ನಿವಾಸದಲ್ಲಿ ತಂಗಿದ್ದರು. 2050 ಚದರ ಅಡಿ ವಿಸ್ತೀರ್ಣದ ಈ ಮನೆಯನ್ನು 31 ಕೋಟಿ ರೂ. ನೀಡಿ ಮಹಾರಾಷ್ಟ್ರ ಸರ್ಕಾರ ಖರೀದಿಸಿದೆ. ಉತ್ತರ ಲಂಡನ್‌ನ ಚಾಕ್ ಫಾರ್ಮ್ ಎಂಬಲ್ಲಿನ ಹೆನ್ರಿ ರಸ್ತೆಯಲ್ಲಿನ 10ನೇ ಸಂಖ್ಯೆಯ ಈ ಮನೆಯನ್ನು ವಸ್ತುಸಂಗ್ರಹಾಲಯ ಮತ್ತು ಅಂಬೇಡ್ಕರ್ ಸ್ಮಾರಕವನ್ನಾಗಿ ಅಭಿವೃದ್ಧಿಪಡಿಸಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ. ಭಾರತೀಯ ಹೈಕಮಿಶನ್ ಇದನ್ನು ನಿರ್ವಹಿಸಲಿದ್ದು, ಭಾರತದಿಂದ ಆಗಮಿಸುವವರಿಗೆ ಉಳಿದುಕೊಳ್ಳುವ ವ್ಯವಸ್ಥೆಯನ್ನೂ ಕಲ್ಪಿಸಲಾಗುತ್ತದೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-9-2015



# ಸಂಸ್ಕೃತ

## ದೇಶಾದ್ಯಂತ ಮನೆ ಮನೆಗೆ ಸಂಸ್ಕೃತ ಅರಿವು ಅಭಿಯಾನ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರೇರಿತ ಸಂಘಟನೆಯಾದ ಸಂಸ್ಕೃತ ಭಾರತಿಯು ಆಗಸ್ಟ್ 23ರಂದು ದೇಶಾದ್ಯಂತ ಹಮ್ಮಿಕೊಂಡಿದ್ದ 'ಮನೆ ಮನೆಗೆ ಸಂಸ್ಕೃತ' (ಗೃಹಂ ಗೃಹಂ ಪ್ರತಿ ಸಂಸ್ಕೃತಂ) ಮಹಾಭಿಯಾನದಲ್ಲಿ 23,400 ಕಾರ್ಯಕರ್ತರು, 4.24 ಲಕ್ಷ ಮನೆಗಳಿಗೆ ತೆರಳಿ ಸಂಸ್ಕೃತದ ಕುರಿತು ಅರಿವು ಮೂಡಿಸಿದ್ದಾರೆ.



ಸಂಸ್ಕೃತ ಮಹಾಭಿಯಾನದ ವತಿಯಿಂದ ರಾಜ್ಯದ ಶೃಂಗೇರಿ, ಶಿವಮೊಗ್ಗ ಮೊದಲಾದ ಪ್ರದೇಶದಲ್ಲಿ ಅತ್ಯುತ್ತಮ ಪ್ರತಿಕ್ರಿಯೆ ದೊರೆತಿದ್ದು, ಸುಮಾರು 60 ಸಾವಿರ ಮನೆಗಳನ್ನು 6 ಸಾವಿರ ಕಾರ್ಯಕರ್ತರು ಸಂಪರ್ಕಿಸಿದರು. ಬೆಂಗಳೂರಿನಲ್ಲಿಯೇ ಸುಮಾರು 1,500 ಕಾರ್ಯಕರ್ತರು 19,400 ಮನೆಗಳಿಗೆ ಸಂಸ್ಕೃತದ ಕುರಿತು ಮಾಹಿತಿ ನೀಡಿದರು.

ಸಂಸ್ಕೃತ ಜೀವಂತ ಭಾಷೆ, ಈಗಿನ ಕಾಲಕ್ಕೆ ಅತ್ಯಂತ ಪ್ರಸ್ತುತ ಭಾಷೆ ಎಂಬ ಸಾರವನ್ನು ಮನೆ ಮನೆಗೆ ತಿಳಿಸುವುದು, ಜಾತಿ–ಮತ, ಬಡವ–ಬಲ್ಲಿದನೆಂಬ ಭೇದವಿಲ್ಲದೆ ಭಾಷೆಯ ಮಹತ್ವ ತಿಳಿಹೇಳಿ, ಸಮಾಜದಲ್ಲಿ ಏಕತೆ ಮೂಡಿಸುವುದು ಅಭಿಯಾನದ ಮುಖ್ಯ ಉದ್ದೇಶವಾಗಿದೆ. ಈ ಅಭಿಯಾನಕ್ಕೆ ಶೃಂಗೇರಿ ಶಾರದಾಪೀಠದ ಶ್ರೀ ಭಾರತೀತೀರ್ಥ ಮಹಾಸ್ವಾಮಿ, ಶ್ರೀ ವಿಧುಶೇಖರಭಾರತೀ ಸ್ವಾಮಿಗಳು ಶುಭ ಹಾರೈಸಿದ್ದಾರೆ ಎಂದು ಸಂಸ್ಕೃತ ಭಾರತಿ ತಿಳಿಸಿದೆ. ಅಂಗಡಿ, ಮನೆ, ಜೋಪಡಿ, ಶಾಲೆ – ಹೀಗೆ ಎಲ್ಲೆಡೆಗೂ ಸಂಸ್ಕೃತ ಭಾರತಿಯ ಕಾರ್ಯಕರ್ತರು ಭೇಟಿ ನೀಡಿ, ಎಲ್ಲ ವರ್ಗದ ಜನರನ್ನು ಸಂಪರ್ಕಿಸಿದ್ದಾರೆ. ದೆಹಲಿ, ತಮಿಳುನಾಡು, ಕೇರಳ, ರಾಜಸ್ಥಾನ ಸೇರಿದಂತೆ ಭಾರತದ ಇತರೆಡೆಗಳಲ್ಲಿಯೂ ಅಭಿಯಾನಕ್ಕೆ ವಿಶೇಷ ಮನ್ನಣೆ ದೊರೆತಿದೆ.

**ಒಂದು ವರ್ಷದ ಸಂಸ್ಕೃತ ಡಿಪ್ಲೊಮಾ:** ಸಂಸ್ಕೃತ ಭಾರತಿ ಸಂಸ್ಥೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಒಂದು ವರ್ಷದ ಸಂಸ್ಕೃತ ಡಿಪ್ಲೊಮಾ ಕೋರ್ಸ್‌ನ್ನು ಆರಂಭಿಸಿದೆ.

## ಅಯೋಧ್ಯೆಯಲ್ಲಿ ರಾಮ ಮ್ಯೂಸಿಯಂ



ಶ್ರೀ ರಾಮಚಂದ್ರನ ಜನ್ಮಸ್ಥಳವಾದ ಅಯೋಧ್ಯೆಯಲ್ಲಿ 'ರಾಮ ಮ್ಯೂಸಿಯಂ' ನಿರ್ಮಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಮಾರಿಷಸ್‌ನ ರೋಸ್ ಬೆಲ್ಲೆಯಲ್ಲಿರುವ ರಾಮಾಯಣ ಸಾಂಸ್ಕೃತಿಕ ಕೇಂದ್ರದ ಮಾದರಿಯಲ್ಲೇ ಇದನ್ನು ನಿರ್ಮಿಸಲಾಗುವುದು ಎಂದು ಕೇಂದ್ರ ಪ್ರವಾಸೋದ್ಯಮ ಸಚಿವ ಮಹೇಶ್ ಶರ್ಮ ತಿಳಿಸಿದ್ದಾರೆ. ಮಾರಿಷಸ್ ಕೇಂದ್ರವನ್ನು ಕಲಿಕೆ ಮತ್ತು ಅಧ್ಯಾತ್ಮಿಕ ಕೇಂದ್ರಗಳನ್ನಾಗಿ ವಿಂಗಡಿಸಲಾಗಿದೆ. ಇದು ವಿಶಿಷ್ಟ ವಿನ್ಯಾಸ ಹೊಂದಿದ್ದು, ಭಾರತದ ವಾಸ್ತುಶಿಲ್ಪ ಶಾಸ್ತ್ರಜ್ಞ ಸತೀಶ್ ಗುಜ್ರಾಲ್ ಇದನ್ನು ವಿನ್ಯಾಸಗೊಳಿಸಿದ್ದಾರೆ. ಇದರ ಬಗ್ಗೆ ಅಧ್ಯಯನ ನಡೆಸುವುದಕ್ಕಾಗಿಯೇ ಭಾರತದಿಂದ ತಂಡವನ್ನು ಕಳುಹಿಸಿಕೊಡಲು ಹಾಗೂ ನ್ಯಾಯಾಲಯದ ಅನುಮತಿ ಪಡೆದು ಮ್ಯೂಸಿಯಂ ನಿರ್ಮಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

## ದೇವಾಲಯ ಮರುನಿರ್ಮಿಸಿ: ಪಾಕ್ 'ಸುಪ್ರೀಂ'



ಪಾಕಿಸ್ತಾನದ ಕರಕ್ ಜಿಲ್ಲೆಯ ಖೈಬರ್ ಪಖ್ತುಂಖ್ವಾ ಪ್ರದೇಶದಲ್ಲಿ ಧ್ವಂಸಗೊಂಡಿರುವ ಹಿಂದು ದೇವಾಲಯವನ್ನು ಮರು ನಿರ್ಮಾಣ ಮಾಡುವಂತೆ ಅಲ್ಲಿನ ಸುಪ್ರೀಂಕೋರ್ಟ್ ಆದೇಶ ನೀಡಿದೆ. ಅಲ್ಲದೆ ತ್ವರಿತ ಗತಿಯಲ್ಲಿ ಕಾಮಗಾರಿ ನಡೆಸಲು ಉತ್ತಮ ವಾಸ್ತುಶಾಸ್ತ್ರಜ್ಞರನ್ನು ನೇಮಿಸುವಂತೆಯೂ ಪಾಕ್ ಸರ್ಕಾರಕ್ಕೆ ಸೂಚನೆ ನೀಡಿದೆ.

ದೇವಾಲಯ ಕಾಮಗಾರಿ ನಡೆಯುತ್ತಿದ್ದು ಈಗಾಗಲೇ ಹೊರಗಿನ ತಡೆಗೋಡೆ ನಿರ್ಮಿಸಲಾಗಿದೆ ಎಂದು ಸ್ಥಳೀಯ ಆಡಳಿತ ನೀಡಿದ ಸ್ಪಷ್ಟನೆಯನ್ನು ತಳ್ಳಿಹಾಕಿದ ಮುಖ್ಯ ನ್ಯಾಯಮೂರ್ತಿ ಜವ್ವದ್ ಎಸ್. ಖವಾಜ ನೇತೃತ್ವದ ತ್ರಿಸದಸ್ಯ ಪೀಠವು ಕಾಂಪೌಂಡ್ ಜತೆಗೆ ಮುಖ್ಯ ಕಟ್ಟಡವನ್ನೂ ಶೀಘ್ರದಲ್ಲೇ ನಿರ್ಮಿಸುವಂತೆ ಆದೇಶ ನೀಡಿತು. ಮುಂದಿನ ವಿಚಾರಣೆಯನ್ನು ಸೆ. 7ಕ್ಕೆ ನಿಗದಿ ಪಡಿಸಲಾಗಿದೆ. ಅಂದು ತೆರಿ ಗ್ರಾಮದಲ್ಲಿ ಪರಮಹಂಸ ಮಹಾರಾಜ್ ಅವರ ಸಮಾಧಿ ಮರುನಿರ್ಮಾಣ ನೀಲನಕ್ಷೆ ಸಿದ್ಧಪಡಿಸಿಕೊಂಡು ನ್ಯಾಯಾಲಯಕ್ಕೆ ಹಾಜರಾಗುವಂತೆ ಸಂಸದ ರಮೇಶ್ ಕುಮಾರ್ ವಂಕ್ವಾನಿ, ಪ್ರಾಂತೀಯ ಗೃಹ ಕಾರ್ಯದರ್ಶಿ ಅರ್ಬಬ್ ಮೊಹಮ್ಮದ್ ಆರಿಫ್ ಮತ್ತು ಜಿಲ್ಲಾಧಿಕಾರಿ ಶೋಯಿಬ್ ಜಾದೂನ್ ಅವರಿಗೆ ಕೋರ್ಟ್ ಸೂಚಿಸಿದೆ. ಆದೇಶವನ್ನು ಯಾವುದೇ ಕಾರಣಕ್ಕೂ ಉಲ್ಲಂಘಿಸದೆ ಕಡ್ಡಾಯವಾಗಿ ಜಾರಿ ಮಾಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

1919ರಲ್ಲಿ ಶ್ರೀ ಪರಮಹಂಸರು ವಿಧಿವಶರಾದಾಗ ಖೈಬರ್ ಪಖ್ತುಂಖ್ವಾ ಪ್ರದೇಶದಲ್ಲಿ ಅವರ ಅಂತ್ಯಕ್ರಿಯೆ ನೇರವೇರಿಸಿ, ಸಮಾಧಿ ಹಾಗೂ ದೇಗುಲ ನಿರ್ಮಿಸಲಾಗಿತ್ತು. 1997ರ ವರೆಗೂ ಇಲ್ಲಿಗೆ ಭಕ್ತರು ಆಗಮಿಸಿ ಪೂಜೆ ಸಲ್ಲಿಸಿಸುತ್ತಿದ್ದರು. ಬಳಿಕ ಕೆಲ ಮೂಲಭೂತವಾದಿಗಳು ಈ ದೇಗುಲವನ್ನು ಧ್ವಂಸಗೊಳಿಸಿದ್ದರು. ಇದರ ಮರು ನಿರ್ಮಾಣಕ್ಕೆ ಸ್ಥಳೀಯರು ಯತ್ನಿಸಿದ್ದರೂ ಸಾಧ್ಯವಾಗಿರಲಿಲ್ಲ. ದೇಗುಲದ ಜಾಗವನ್ನು ಅಲ್ಲಿನ ಮುಫ್ತಿ ಇಫ್ತೀಕರುದ್ದೀನ್ ಅತಿಕ್ರಮಿಸಿಕೊಂಡಿದ್ದ ಎನ್ನಲಾಗಿದೆ.



## ಕೇಂದ್ರ ಸರ್ಕಾರ : ದೇಶೀಯ ಗೋ ತಳಿ ರಕ್ಷಣೆಗೆ 'ಕಾಮಧೇನು'

ದೇಶೀಯ ತಳಿಯ ಗೋವುಗಳನ್ನು ರಕ್ಷಿಸಲು ನರೇಂದ್ರ ಮೋದಿ ಸರ್ಕಾರ 'ಗೋಕುಲ ಕಾಮಧೇನು' ಎಂಬ ನೂತನ ಯೋಜನೆ ಆರಂಭಿಸಲು ನಿರ್ಧರಿಸಿದೆ. ಭಾರತದಲ್ಲಿ ವಿನಾಶದ ಅಂಚಿನಲ್ಲಿರುವ ಸುಮಾರು 34 ವಿಧದ ದೇಶಿ ಗೋ ತಳಿಗಳನ್ನು ರಕ್ಷಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಮುಂದಿನ 10 ವರ್ಷಗಳಲ್ಲಿ ಈ ಯೋಜನೆ ಪೂರ್ಣಗೊಳ್ಳಲಿದ್ದು, ಇದಕ್ಕಾಗಿ ಕೇಂದ್ರ ಸರ್ಕಾರ 500 ಕೋಟಿ ರೂ. ಅನುದಾನ ನಿಗದಿಪಡಿಸಿದೆ. ಥಾರ್ ಪಾರ್ಕರ್ ಗಿರ್, ಕಾಂಕ್ರೇಜ್, ರಾಠಿ, ಸಾಹಿವಾಲ್ ಹಾಗೂ ಬದ್ರಿ ತಳಿಗಳ ಸಂರಕ್ಷಣೆಗೆ ಕೇಂದ್ರ ಒತ್ತು ನೀಡಲಿದೆ. ಆರಂಭದಲ್ಲಿ ಮಧ್ಯಪ್ರದೇಶ ಹಾಗೂ ಆಂಧ್ರಪ್ರದೇಶದಲ್ಲಿ ಕಾಮಧೇನು ಕೇಂದ್ರಗಳು ಸ್ಥಾಪನೆಗೊಳ್ಳಲಿದ್ದು, ಇಲ್ಲಿ ದೇಶಿ ತಳಿಯ ಗೋವುಗಳ ಪಾಲನೆ ನಡೆಯಲಿದೆ. ಬಳಿಕ ವಿವಿಧ ರಾಜ್ಯಗಳಿಗೆ ಈ ಕೇಂದ್ರಗಳನ್ನು ವಿಸ್ತರಿಸಲು ನಿರ್ಧರಿಸಲಾಗಿದೆ.

## ಮದರಸಾಗಳ ಮೇಲೆ ತ್ರಿವರ್ಣ ಧ್ವಜ ಆರೋಹಣ ಕಡ್ಡಾಯ

ಸ್ವಾತಂತ್ರ್ಯದಿನೋತ್ಸವ ಮತ್ತು ಗಣರಾಜ್ಯೋತ್ಸವದ ದಿನಗಳಂದು ಉತ್ತರ ಪ್ರದೇಶದಲ್ಲಿರುವ ಎಲ್ಲ ಮದರಸಾಗಳ ಮೇಲೆ ಭಾರತದ ರಾಷ್ಟ್ರಧ್ವಜವನ್ನು ಕಡ್ಡಾಯವಾಗಿ ಆರೋಹಣ ಮಾಡುವಂತೆ ನೋಡಿಕೊಳ್ಳಬೇಕು. ಈ ಸಂಬಂಧ ಕೂಡಲೇ ಅಗತ್ಯವಾದ ಆದೇಶಗಳನ್ನು ಹೊರಡಿಸಬೇಕೆಂದು ಅಲಹಾಬಾದ್ ಹೈಕೋರ್ಟ್ ಉತ್ತರ ಪ್ರದೇಶ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಆಗಸ್ಟ್ 15 ಮತ್ತು ಜನವರಿ 26ರಂದು ಮದರಸಾಗಳು ರಾಷ್ಟ್ರಧ್ವಜಾರೋಹಣ ಮಾಡುವುದನ್ನು ಕಡ್ಡಾಯಗೊಳಿಸಬೇಕೆಂದು ಆಲಿಗಢದ ನಿವಾಸಿ ಅರುಣ್ ಗೌರ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಅಲಹಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ಮತ್ತು ನ್ಯಾ. ಯಶವಂತ ವರ್ಮಾ ಅವರನ್ನು ಒಳಗೊಂಡ ಪೀಠ ಉತ್ತರ ಪ್ರದೇಶ ಸರ್ಕಾರಕ್ಕೆ ಈ ನಿರ್ದೇಶನ ನೀಡಿದೆ.

## ಎಬಿವಿಪಿ : ಜಗಿವ ತಂಬಾಕು ನಿಷೇಧಕ್ಕಾಗಿ ಚಳವಳಿ

ರಾಜ್ಯದಲ್ಲಿ ಜಗಿಯುವ ತಂಬಾಕು ನಿಷೇಧಿಸುವಂತೆ ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನೇತೃತ್ವದಲ್ಲಿ ಮೈಸೂರು ಭಾಗದ ವಿದ್ಯಾರ್ಥಿಗಳು ಸಿಎಂ ಸಿದ್ಧರಾಮಯ್ಯ ಅವರಿಗೆ ತಂಬಾಕು ಪೊಟ್ಟಣಗಳನ್ನು ಕಳುಹಿಸಿ, ಚಳವಳಿ ಆರಂಭಿಸಿದ್ದಾರೆ. ಈಗಾಗಲೇ ಸಿಎಂ ಕಚೇರಿಗೆ ಪ್ರತಿದಿನ ಹತ್ತಾರು ತಂಬಾಕು ಪೊಟ್ಟಣಗಳು ಅಂಚೆ ಮೂಲಕ ಬರುತ್ತಿದ್ದು, ಇಂತಹ ತಂಬಾಕು ಪೊಟ್ಟಣಗಳ ಸಂಖ್ಯೆ ಐದು ಸಾವಿರ ದಾಟಿದೆ ಎನ್ನಲಾಗಿದೆ.

ಗುಟ್ಕಾನಿಷೇಧದ ಬಳಿಕ ಅಡಿಕೆ ಮತ್ತು ತಂಬಾಕನ್ನು ಪ್ರತ್ಯೇಕಗೊಳಿಸಿ ಕಂಪೆನಿಗಳು ಸರ್ಕಾರದ ಆದೇಶಗಳ ಕಣ್ಣಿಗೆ ಮಣ್ಣೆರಚಿದವು. 13 ರಾಜ್ಯಗಳಲ್ಲಿ ಜಗಿಯುವ ತಂಬಾಕು ಮಾರಾಟ ನಿಷೇಧಿಸಲಾಯಿತು. ರಾಜ್ಯದಲ್ಲೂ ಜಗಿಯುವ ತಂಬಾಕು ನಿಷೇಧಿಸುವಂತೆ ಕೇಂದ್ರ ಆರೋಗ್ಯ ಸಚಿವರು ರಾಜ್ಯದ ಮುಖ್ಯಮಂತ್ರಿಗೆ 2014ರ ಆಗಸ್ಟ್‌ನಲ್ಲಿ ಪತ್ರ ಬರೆದಿದ್ದರು. ಆದರೆ ರಾಜ್ಯ ಸರ್ಕಾರ ಅಂತಹ ನಿರ್ಧಾರ ಕೈಗೊಳ್ಳಲಿಲ್ಲ. ಇದನ್ನು ಪ್ರತಿಭಟಿಸಿ, ಕಳೆದ 2 ತಿಂಗಳಿನಿಂದ ಚಾಮರಾಜನಗರ, ಮೈಸೂರು, ಹಾಸನದ ವಿದ್ಯಾರ್ಥಿಗಳು ಸಿಎಂಗೆ ತಂಬಾಕು ಪೊಟ್ಟಣಗಳನ್ನು ರವಾನಿಸುತ್ತಿದ್ದು, ಇದೀಗ ಉ.ಕ. ಭಾಗಕ್ಕೂ ವಿಸ್ತರಿಸಿದೆ. ಕಳೆದ 2 ತಿಂಗಳಿನಿಂದ ಬರೋಬ್ಬರಿ 5 ಸಾವಿರಕ್ಕೂ ಅಧಿಕ ತಂಬಾಕು ಪ್ಯಾಕೆಟ್‌ಗಳು, 20 ಸಾವಿರಕ್ಕೂ ಅಧಿಕ ಪತ್ರಗಳು ಸಿಎಂ ಕಾರ್ಯಾಲಯ ತಲುಪಿವೆ. ಬೆಂಗಳೂರಿನಲ್ಲಿಯೂ ವಿದ್ಯಾರ್ಥಿಗಳು ಈ ಚಳವಳಿಯನ್ನು ಆರಂಭಿಸಲು ಸಿದ್ಧತೆ ನಡೆಸಿದ್ದಾರೆ.



ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04.
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ ವಿವರ ಮತ್ತು ವಿಳಾಸ ಬದಲಾವಣೆಗಾಗಿ : 97391 83021
ಸಂಪಾದಕೀಯ : 9731264009